# ಜನತಾವಾಣಿ

ಸಂಪಾದಕರು : ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ


ದಾವಣಗೆರೆ
ಗುರುವಾರ, ಫೆಬ್ರವರಿ 27, 2025

ಸಂಪುಟ : 51 ಸಂಚಿಕೆ : 286 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


# ಹರ ಹರ ಮಹಾದೇವ




ಪಾತಾಳಲಿಂಗೇಶ್ವರ


ಮಾರ್ಕಂಡೇಶ್ವರ


ಶಿವಧ್ಯಾನ ಮಂದಿರದಲ್ಲಿ ಭಕ್ತರು

## 45 ದಿನಗಳ ಮಹಾಕುಂಭಕ್ಕೆ ತೆರೆ

### ಶ್ರದ್ಧೆ, ಸಂಪ್ರದಾಯ, ತಂತ್ರಜ್ಞಾನ ಬೆರೆತ ಮಹಾ ಕುಂಭ ಮೇಳ

ಮಹಾಕುಂಭ ನಗರ, ಫೆ. 26 - ವಿಶ್ವದ ಅತಿ ದೊಡ್ಡ ಧಾರ್ಮಿಕ ಸಂಗಮ ಎಂದೇ ಹೆಸರಾಗಿರುವ ಪ್ರಯಾಗ್‌ರಾಜ್ ಕುಂಭಮೇಳ 45 ದಿನಗಳ ನಂತರ ತೆರೆ ಕಂಡಿದೆ. ಈ ಅವಧಿಯಲ್ಲಿ ಕೋಟ್ಯಾಂತರ ಜನರು ಸಂಗಮದಲ್ಲಿ ಪವಿತ್ರ ಸ್ನಾನ ಕೈಗೊಂಡಿದ್ದಾರೆ. ಶಿವರಾತ್ರಿಯ ದಿನದಂದು ಮಹಾಕುಂಭ ಮೇಳಕ್ಕೆ ತೆರೆ ಬಿದ್ದಿದೆ.

ಜನವರಿ 13ರಂದು ಆರಂಭವಾದ ಕುಂಭಮೇಳಕ್ಕೆ 64.77 ಕೋಟಿ ಜನರು ಭೇಟಿ ನೀಡಿದ್ದಾರೆ ಎಂದು ಉತ್ತರ ಪ್ರದೇಶ ಸರ್ಕಾರ ತಿಳಿಸಿದೆ. ಇದು ಸರ್ಕಾರ ನಿರೀಕ್ಷಿಸಿದ ಸಂಖ್ಯೆಗಿಂತ ಸಾಕಷ್ಟು ಹೆಚ್ಚಾಗಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನ ಮಂತ್ರಿ ನರೇಂದ್ರ ಮೋದಿ, ಸಚಿವರು ಹಾಗೂ ಉದ್ಯಮಿಗಳು ಸೇರಿದಂತೆ ಸಮಾಜದ ಎಲ್ಲ ವರ್ಗದ ಜನರು ಕುಂಭಮೇಳದಲ್ಲಿ ಪಾಲ್ಗೊಂಡಿದ್ದರು.

ಧರ್ಮ, ಸಂಸ್ಕೃತಿ ಹಾಗೂ ಅಧ್ಯಾತ್ಮದ ಸಂಗಮವಾಗಿರುವ ಕುಂಭಮೇಳದಲ್ಲಿ ಜನಸಮೂಹದ ನಿರ್ವಹಣೆಗಾಗಿ ಕೃತಕ ಬುದ್ಧಿವಂತಿಕೆ ಸೇರಿದಂತೆ ಆಧುನಿಕ ತಂತ್ರಜ್ಞಾನವನ್ನು ಬಳಸಲಾಗಿತ್ತು.

144 ವರ್ಷಗಳ ನಂತರ ನಡೆದ ಮಹಾಕುಂಭ ಮೇಳಕ್ಕೆ ವ್ಯಾಪಕ ವ್ಯವಸ್ಥೆ ಮಾಡಲಾಗಿತ್ತು. ಆದರೂ ಅಪಾರ ಜನಜಂಗುಳಿಯ ಕಾರಣದಿಂದಾಗಿ ಮೌನಿ ಅಮಾವಾಸ್ಯೆಯ ದಿನದಂದು ಕಾಲ್ತುಳಿತ ಸಂಭವಿಸಿ 30 ಜನರು ಸಾವನ್ನಪ್ಪಿದ್ದರು. ಇಷ್ಟಾದರೂ ಜನರು ಅಪಾರ ಸಂಖ್ಯೆಯಲ್ಲಿ ಕುಂಭಮೇಳಕ್ಕೆ ಬರುವುದು ಮುಂದುವರೆದಿತ್ತು. ಇದರಿಂದಾಗಿ ಕಳೆದ ಆರು ವಾರಗಳಲ್ಲಿ ಸಂಗಮದ ಪ್ರದೇಶ ಹಗಲು ರಾತ್ರಿ ಎನ್ನದೆ ಜನನಿಬಿಡವಾಗಿತ್ತು.

ಈ ಬಗ್ಗೆ ಮಾತನಾಡಿರುವ ಋಷಿಕೇಶದ ಪರಮಾರ್ಥ ನಿಕೇತನ ಆಶ್ರಮದ ಅಧ್ಯಕ್ಷ ಚಿದಾನಂದ ಸರಸ್ವತಿ, ಕೊನೆಯ ಭಕ್ತ ಪವಿತ್ರ ಸ್ನಾನ ಪೂರ್ಣಗೊಳಿಸುವವರೆಗೂ ಮಹಾ ಕುಂಭ ಮುಂದುವರೆಯುತ್ತದೆ. ಬ್ರಾಹ್ಮೀ ಮುಹೂರ್ತದ ವೇಳೆ ದಿನದ ಆರಂಭವಾಗುತ್ತದೆ. ಹೀಗಾಗಿ ಗುರುವಾರ ಬೆಳಗಿನ ಜಾವದವರೆಗೂ ಕುಂಭಮೇಳದ ಅವಧಿ ಇರುತ್ತದೆ ಎಂದಿದ್ದಾರೆ. ಮಕರ ಸಂಕ್ರಾಂತಿ, ಮೌನಿ ಅಮಾವಾಸ್ಯೆ, ವಸಂತ ಪಂಚಮಿ, ಪೌಷ್ ಪೂರ್ಣಿಮೆ ಹಾಗೂ (4ನೇ ಪುಟಕ್ಕೆ)

## ಶಿವನಾಮ ಸ್ಮರಣೆಯಲ್ಲಿ ಮಿಂದೆದ್ದ ದೇವನಗರಿ

### ಶಿವನಿಗೆ ವಿಶೇಷ ಪೂಜೆ, ಅಲಂಕಾರ, ಸರದಿ ಸಾಲಿನಲ್ಲಿ ನಿಂತು ದರ್ಶನ ಪಡೆದ ಭಕ್ತರು

ದಾವಣಗೆರೆ, ಫೆ.26- ಶಿವನಾಮ ಸ್ಮರಣೆಯ ಮಹಾಶಿವರಾತ್ರಿ ಹಬ್ಬವನ್ನು ಗುರುವಾರ ನಗರದಲ್ಲಿ ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು.

ಭಕ್ತರು ಬೆಳಿಗ್ಗೆಯಿಂದ ರಾತ್ರಿವರೆಗೆ ದೇವಸ್ಥಾನಗಳಿಗೆ ತೆರಳಿ ದೇವರ ದರ್ಶನ ಪಡೆದರು. ರಾತ್ರಿ ಶಿವನಾಮ ಸ್ಮರಿಸುತ್ತಾ ಜಾಗರಣೆ ಮಾಡಿ ಭಕ್ತಿ ಮೆರೆದರು. ಓಂ ನಮಃ ಶಿವಾಯ ಎಲ್ಲೆಡೆ ಅನುರುಣಿಸುತ್ತಿತ್ತು.

ನಗರದ ಎಲ್ಲಾ ದೇವಸ್ಥಾನಗಳಲ್ಲಿ ಶಿವರಾತ್ರಿಯ ವಿಶೇಷ ಪೂಜೆ ಜರುಗಿತು. ದೇವರ ಮೂರ್ತಿ ಹಾಗೂ ಶಿವಲಿಂಗಕ್ಕೆ ಅಭಿಷೇಕ ಮಾಡಲಾಯಿತು. ಭಕ್ತರು ಬಿಲ್ವಪತ್ರೆಯನ್ನು ಈಶ್ವರ ಲಿಂಗಕ್ಕೆ ಅರ್ಪಿಸಿ, ಜಲಾಭಿಷೇಕ ಮಾಡಿದರು. ಹಬ್ಬದ ನಿಮಿತ್ತ ಮೂರ್ತಿಗಳಿಗೆ ಮಾಡಿದ ವಿಶೇಷ ಅಲಂಕಾರ ಗಮನ ಸೆಳೆಯಿತು.

ಭಕ್ತರು ದೇವಸ್ಥಾನಗಳಿಗೆ ಕುಟುಂಬದೊಂದಿಗೆ ತೆರಳಿ, ಸರದಿಯಲ್ಲಿ ನಿಂತು ದೇವರ ದರ್ಶನ ಪಡೆದು ಪುನೀತರಾದರು. ಶಿವನ ಸ್ಮರಿಸುವ ಭಕ್ತಿಗೀತೆಗಳು, ಭಜನೆಗಳು ಹಾಗೂ ಹಾಡುಗಳು ಎಲ್ಲೆಡೆ ಕೇಳಿ ಬರುದ್ದವು. ಕೆಲ ದೇವಸ್ಥಾನದ ಆಡಳಿತ ಮಂಡಳಿಗಳು ಭಕ್ತರಿಗೆ ಪ್ರಸಾದ ವ್ಯವಸ್ಥೆ ಕೂಡ ಮಾಡಿದ್ದರು. ಸಂಜೆ ಭಕ್ತರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಗೀತಾಂಜಲಿ ಚಿತ್ರಮಂದಿರದ ಪಕ್ಕದಲ್ಲಿನ ಶ್ರೀ ಲಿಂಗೇಶ್ವರ ದೇವಾಲಯದಲ್ಲೂ ವಿಶೇಷ ಪೂಜೆ ನಡೆಯಿತು. ಶಿವ ದರ್ಶನಕ್ಕೆ ಆಗಮಿಸುವ ಭಕ್ತರಿಗೆ ಸರದಿ ಸಾಲಿನಲ್ಲಿ ನಿಲ್ಲಲು ಶಾಮಿಯಾನದ ವ್ಯವಸ್ಥೆ ಮಾಡಲಾಗಿತ್ತು. ತಡರಾತ್ರಿ ವರೆಗೂ ಭಕ್ತರು ಸರದಿಯಲ್ಲಿ ನಿಂತು ದರ್ಶನ ಪಡೆದರು.

ಕೆಟಿಜೆ ನಗರದ 10ನೇ ಕ್ರಾಸ್ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದಲ್ಲಿ ಸಂಜೆ ವಿಶೇಷ ಪೂಜೆ ನಡೆದವು. ಕನ್ನಿಕಾಪರಮೇಶ್ವರಿ ದೇವಸ್ಥಾನ ರಸ್ತೆಯಲ್ಲಿರುವ ಶ್ರೀ ಮಾರ್ಕಂಡೇಶ್ವರ ದೇವಸ್ಥಾನದಲ್ಲಿ ಸಂಜೆ ಮಹಾಪೂಜೆ, ಜಾಗರಣೆ, ಫಳಾರದ ವ್ಯವಸ್ಥೆ ನಂತರ ಮನರಂಜನಾ ಕಾರ್ಯಕ್ರಮಗಳು ನಡೆದವು.

ಅಥಣಿ ಕಾಲೇಜು ಆವರಣದಲ್ಲಿ ಎತ್ತರದ ಶಿವ ಮೂರ್ತಿ ಮುಂಭಾಗ ಶಿವಭಕ್ತಿ ಬಿಂಬಿಸುವ ಕಲಾ ಪ್ರದರ್ಶನಗಳು ನಡೆದವು. ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿರುವ ಶಿವ ಧ್ಯಾನ ಮಂದಿರದಲ್ಲಿ ಶಿವರಾತ್ರಿ ಅಂಗವಾಗಿ ಬಾಪೂಜಿ ಇಂಜಿನಿಯರಿಂಗ್ ಕಾಲೇಜು ವತಿಯಿಂದ ಸಂಜೆ ಖ್ಯಾತ ಗಾಯಕಿ ಅರ್ಚನ ಉಡುಪ ಅವರಿಂದ ಭಕ್ತಿ ಮಂಜರಿ ಕಾರ್ಯಕ್ರಮ ನಡೆಯಿತು. ಸರದಿಯಲ್ಲಿ ಶಿವನ ದರ್ಶನ ಪಡೆದ ಭಕ್ತರು, ಅರ್ಚನಾ ಅವರ ಹಾಡುಗಳಿಗೆ ತಲೆ ದೂಗಿದರು.

ಜಯದೇವ ವೃತ್ತದಲ್ಲಿನ ಕೂಡಲಿ ಶಂಕರ ಮಠದಲ್ಲಿ ಅಖಂಡ ರುದ್ರಾಭಿಷೇಕ ನಡೆಯಿತು. ನಿಟುವಳ್ಳಿಯ ಶ್ರೀ ದುರ್ಗಾಂಬಿಕಾ ದೇವಸ್ಥಾನ ಬಳಿಯ ಈಶ್ವರ ದೇವಸ್ಥಾನದಲ್ಲಿ ಬೆಳಿಗ್ಗೆಯಿಂದಲೇ ವಿಶೇಷ ಪೂಜೆಗಳು ನಡೆದವು. ರಾತ್ರಿ ಜಾಗರಣೆ, ಭಜನೆ ಕಾರ್ಯಕ್ರಮ ನಡೆಯಿತು. ವಿನೋಬನಗರದಲ್ಲಿನ ಶ್ರೀ ಶಂಭುಲಿಂಗೇಶ್ವರ ದೇವಸ್ಥಾನದಲ್ಲಿ ಬೆಳಿಗ್ಗೆ ರುದ್ರಾಭಿಷೇಕ, ಪಂಚಾಮೃತಾಭಿಷೇಕ ನಡೆಯಿತು. ವಿದ್ಯಾನಗರದ ಈಶ್ವರ, ಪಾರ್ವತಿ ಗಣಪತಿ ದೇವಸ್ಥಾನದಲ್ಲಿ ಬೆಳಿಗ್ಗೆ ರುದ್ರಾಭಿಷೇಕ, ಕ್ಷೀರಾಭಿಷೇಕ, ಸಹಸ್ರ ಬಿಲ್ವಾರ್ಚನೆ ನಡೆಯಿತು.

ಹಳೇಪೇಟೆಯ ಪಾತಾಳ ಲಿಂಗೇಶ್ವರ ದೇವಳದಲ್ಲಿ ವಿಶೇಷ ಪೂಜೆ ನಡೆಯಿತು. ನಗರದ ನೀಲಕಂಠೇಶ್ವರ ದೇವಸ್ಥಾನ ಸೇರಿದಂತೆ ಎಂಸಿಸಿ ಎ, ಬಿ ಬ್ಲಾಕ್, ನಿಜಲಿಂಗಪ್ಪ ಬಡಾವಣೆ, ವಿದ್ಯಾನಗರ, ಹಳೇಪೇಟೆ ಸೇರಿದಂತೆ ಅನೇಕ ಕಡೆ ಇರುವ ಶಿವ ದೇವಾಲಯಗಳಲ್ಲಿ ಶಿವಪೂಜೆ ಮತ್ತು ಜಾಗರಣೆ, ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.





## ಆಕರ್ಷಕ ಜ್ಯೋತಿರ್ಲಿಂಗಗಳೊಂದಿಗ ಸದ್ಭಾವನಾ ಶಾಂತಿಯಾತ್ರೆ

ದಾವಣಗೆರೆ, ಫೆ.26- ಮಹಾಶಿವರಾತ್ರಿ ಪ್ರಯುಕ್ತ ಅಂತರರಾಷ್ಟ್ರೀಯ ಅಧ್ಯಾತ್ಮಿಕ ಸೇವಾ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ ವಿಶ್ವ ಸದ್ಭಾವನಾ ಶಾಂತಿಯಾತ್ರೆಯನ್ನು ಇಂದು ನಗರದಲ್ಲಿ ನಡೆಸಲಾಯಿತು.

ಆಕರ್ಷಕ ಶಿವಲಿಂಗಗಳೊಂದಿಗೆ ಶಾಂತಿ ಯಾತ್ರೆಯು ಮೋತಿ ವೀರಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಮೈದಾನದಿಂದ ಆರಂಭಗೊಂಡು, ರಾಜಬೀದಿಗಳಲ್ಲಿ ಸಂಚರಿಸಿತು.

ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ನೇತೃತ್ವದಲ್ಲಿ ಏರ್ಪಾಡಾಗಿದ್ದ ಶಾಂತಿ ಯಾತ್ರೆಯಲ್ಲಿ, ಆಕರ್ಷಕ ಜ್ಯೋತಿರ್ಲಿಂಗಗಳು ಸಾರ್ವಜನಿಕರನ್ನು ಹಿಡಿದಿಟ್ಟುಕೊಂಡಿದ್ದವು. ಶಾಂತಿಯಾತ್ರೆ ಮುಂಭಾಗದಲ್ಲಿ ಹೆಜ್ಜೆ ಹಾಕುತ್ತಿದ್ದ ಕುದುರೆ ಮತ್ತು ಆನೆ ಗಮನ ಸೆಳೆದವು.

ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ, ಹಿರಿಯ ವೈದ್ಯರೂ ಆದ ಜಿಲ್ಲಾ ಲಯನ್ಸ್ ಮಾಜಿ ರಾಜ್ಯಪಾಲ ಡಾ. ಬಿ.ಎಸ್. ನಾಗಪ್ರಕಾಶ್, ದಾವಣಗೆರೆ ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್.ಜಿ. ಉಳುವಯ್ಯ, ವೀರಶೈವ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷ ಅಜ್ಜಂಪುರ ಶೆಟ್ರು ಮೃತ್ಯುಂಜಯ, ಮೋತಿ ವೀರಪ್ಪ ಕಾಲೇಜಿನ ಪ್ರಾಂಶುಪಾಲ ಪಂಚಾಕ್ಷರಪ್ಪ ಸೇರಿದಂತೆ, ಗಣ್ಯರು ಶಾಂತಿಯಾತ್ರೆಗೆ ಚಾಲನೆ ನೀಡಿದರು.

ರಾಜಯೋಗ ಶಿಕ್ಷಕರುಗಳಾದ ಬ್ರಹ್ಮಾಕುಮಾರಿ ಶೋಭಾಜಿ, ಬ್ರಹ್ಮಾಕುಮಾರಿ ಶಾಂತಾಜಿ, ಬ್ರಹ್ಮಾಕುಮಾರಿ ಅರುಣಾಜಿ, ಬ್ರಹ್ಮಾಕುಮಾರಿ ಚೆನ್ನಮ್ಮ, ಬ್ರಹ್ಮಾಕುಮಾರಿ ಸುಧಾ ಮತ್ತಿತರರು ವಹಿಸಿದ್ದರು.

ಮಕ್ಕಳ ತಜ್ಞ ವೈದ್ಯರುಗಳಾದ ಡಾ. ಮಧು ಪೂಜಾರ್, ಡಾ. ಸ್ನೇಹ ಪೂಜಾರ್ ದಂಪತಿ, ಅಸ್ತಮ ತಜ್ಞ ವೈದ್ಯ (5ನೇ ಪುಟಕ್ಕೆ)

## ಪಾದಯಾತ್ರೆಯಿಂದ ದೇಹ, ಭಾವ, ಅಂತರಂಗ ಶುದ್ಧಿ: ಪುಣ್ಯಕೋಟಿ ಶ್ರೀ



ದಾವಣಗೆರೆ, ಫೆ. 26- ಪಾದಯಾತ್ರೆ ಮಾಡುವುದರಿಂದ ದೇಹ, ಭಾವ, ಅಂತರಂಗ ಶುದ್ಧಿ ಜೊತೆಗೆ ಆರೋಗ್ಯ ಕೂಡ ವೃದ್ಧಿಯಾಗುತ್ತದೆ ಎಂದು ಕೋಡಿಯಾಲ ಹೊಸಪೇಟೆಯ ಅವಿಮುಕ್ತ ತಪೋಕ್ಷೇತ್ರ ಪುಣ್ಯಕೋಟಿ ಮಠದ ಶ್ರೀ ಬಾಲಯೋಗಿ ಜಗದೀಶ್ವರ ಸ್ವಾಮೀಜಿ ಹೇಳಿದರು.

ನಗರದ ಚೌಕಿಪೇಟೆಯಲ್ಲಿನ ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ದೇವಸ್ಥಾನದ ಆವರಣದಲ್ಲಿ ಶ್ರೀ ಕುರುವತ್ತಿ ಬಸವೇಶ್ವರ ಪಾದಯಾತ್ರೆ ಸೇವಾ ಸಮಿತಿ ವತಿಯಿಂದ ಕುರುವತ್ತಿ ಶ್ರೀ ಮಲ್ಲಿಕಾರ್ಜುನಸ್ವಾಮಿ ಮತ್ತು ಶ್ರೀ ಬಸವೇಶ್ವರಸ್ವಾಮಿ ರಥೋತ್ಸವದ ಪ್ರಯುಕ್ತ ಹಮ್ಮಿಕೊಂಡಿದ್ದ 21 ನೇ ವರ್ಷದ ಪಾದಯಾತ್ರೆ ಬೀಳ್ಕೊಡುಗೆ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಕೇವಲ ಪಾದಯಾತ್ರೆಯಲ್ಲಿ ಕಲ್ಲು, ಮುಳ್ಳು, ಕಷ್ಟ, ಸಂಕಷ್ಟಗಳು ಬರುತ್ತವೆ ಎಂದು ತಿಳಿಯದೇ ಬದುಕಿನುದ್ದಕ್ಕೂ ಕಷ್ಟ, ಸಂಕಷ್ಟಗಳು ಇದ್ದೇ ಇರುತ್ತವೆ. ಅವುಗಳನ್ನೆಲ್ಲಾ ಮೆಟ್ಟಿ ನಿಂತು ಮುನ್ನಡೆದಾಗ ಜೀವನದ ಹಾದಿ ಸುಗಮವಾಗಲು ಸಾಧ್ಯ ಎಂದರು.

ಬಸವೇಶ್ವರನ ನಾಮಸ್ಮರಣೆಯೊಂದಿಗೆ ನಮ್ಮ ಬದುಕಿನುದ್ದಕ್ಕೂ ಒಳಿತಾಗಲಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತಾ ಪಾದಯಾತ್ರೆ ಮಾಡುತ್ತೇವೆ. ಬದುಕು ಶಾಶ್ವತ ಅಲ್ಲ. ನಾವು ಮಾಡುವ ಪುಣ್ಯ ಕಾರ್ಯಗಳು ಮಾತ್ರ ಶಾಶ್ವತವಾಗಿ ಉಳಿಯುತ್ತವೆ ಎಂದು ಹೇಳಿದರು.

ಭಾರತೀಯ ಸಂಸ್ಕೃತಿಯನ್ನು ಉಳಿಸುವಂತಹ ಇಂತಹ ಅನೇಕ ಪಾದಯಾತ್ರೆಗಳು ನಾಡಿನಾದ್ಯಂತ ಜರುಗುತ್ತಿವೆ. ಪಾದಯಾತ್ರೆ ಕಾರ್ಯ ಅತ್ಯಂತ ಶ್ರೇಷ್ಠವಾದುದು. ನಾವು ನಮ್ಮ ಮಠಕ್ಕೆ ಪುಣ್ಯಕೋಟಿ ಎಂದು ಹೆಸರಿಟ್ಟಿದ್ದೇವೆ. ಪುಣ್ಯಕೋಟಿ ಎಂದರೆ ಸತ್ಯ ಮತ್ತು ಪ್ರಾಮಾಣಿಕತೆ ಎಂದರ್ಥ. ಎಲ್ಲಿಯವರೆಗೆ ಸತ್ಯವನ್ನು ಹೇಳುವುದಿಲ್ಲವೋ ಅಲ್ಲಿಯವರೆಗೆ ನಾವು ಸತ್ಪುರುಷರಾಗಲು ಸಾಧ್ಯವಿಲ್ಲ ಎಂದು ಹೇಳಿದರು.

ಯಾರು ನಮ್ಮ ಬದುಕಿಗೆ, ವ್ಯವಸ್ಥೆಗೆ ಸಹಕಾರ ನೀಡುವವರು, ಕಷ್ಟದಲ್ಲಿ ನೆರವಾಗುವವರೇ ಭಗವಂತನ ಸ್ವರೂಪ ಎಂದು ತಿಳಿಯಬೇಕಾಗಿದೆ ಎಂದರು.

ಅಭಿ ಕಾಟನ್ ಮಾಲೀಕ ಎನ್.ಬಕ್ಕೇಶ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಸದಸ್ಯೆ ವಾಣಿ ಬಕ್ಕೇಶ್, ಮಹಾ ನಗರ ಪಾಲಿಕೆ ಮಾಜಿ ಉಪಮೇಯರ್ (4ನೇ ಪುಟಕ್ಕೆ)

## ಎರಡು ಕೋಟಿ ವರದಕ್ಷಿಣೆ ಕೊಟ್ಟ ಪತ್ನಿ ವಿರುದ್ಧ ಕ್ರಮ

### ಗಂಡನ ಅರ್ಜಿ ತಳ್ಳಿ ಹಾಕಿದ ಹೈಕೋರ್ಟ್

ನವದೆಹಲಿ, ಫೆ. 26 - ತನಗೆ ಎರಡು ಕೋಟಿ ರೂ. ವರದಕ್ಷಿಣೆ ಕೊಟ್ಟ ಹಾಗೂ ಅದ್ದೂರಿಯಾಗಿ ಮದುವೆ ಮಾಡಿಕೊಟ್ಟ ಹೆಂಡತಿಯ ಕಡೆಯವರ ಹಣಕಾಸಿನ ಕುರಿತು ಆದಾಯ ತೆರಿಗೆ ತನಿಖೆ ನಡೆಸಬೇಕು ಎಂದು ವ್ಯಕ್ತಿಯೊಬ್ಬ (4ನೇ ಪುಟಕ್ಕೆ)


Prakash Coffee Works
1946 FILTER COFFEE & TEA

ನಮ್ಮಲ್ಲಿ ಉತ್ತಮವಾದ ಕಾಫಿ ಪುಡಿ ಹಾಗು ಟೀ ಪುಡಿ ಉತ್ತಮವಾದ ದರದಲ್ಲಿ ದೊರೆಯುತ್ತದೆ.

೧೯೪೬ ಕಾಫಿ ಶಾಪ್ ಫ್ರಾಂಚೈಸ್ ಲಭ್ಯವಿದೆ. ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ
+91-9900438052 || +91-9740153513

ದಾವಣಗೆರೆ ೧೯೪೬ ಫ್ರಾಂಚೈಸ್ ಔಟ್ಲೆಟ್ಸ್

ವಿಜಯಲಕ್ಷ್ಮಿ ರೋಡ್, ಮಾಮಾಸ್ ಜಾಯಿಂಟ್ ರೋಡ್, ಎಂ ಸಿ ಸಿ ಎ ಬ್ಲಾಕ್, ಕೆ ಅರ್ ರೋಡ್, ಯುನಿಟಿ ಹಾಸ್ಪಿಟಲ್ ರೋಡ್, ಸಂಗೊಳ್ಳಿ ರಾಯಣ್ಣ ಸರ್ಕಲ್ ಪಿ ಬಿ ರೋಡ್, ನಿಟುವಲ್ಲಿ ರೋಡ್ ಎಚ್ ಕೆ ಅರ್ ಸರ್ಕಲ್


### ಆಲೂರು ಶ್ರೀಮತಿ ನೀಲಮ್ಮ ನಿಧನ




ದಾವಣಗೆರೆ ಸಿಟಿ ಹಗೆದಿಬ್ಬ ಸರ್ಕಲ್ ಬೊಮ್ಮಲಿಂಗಯ್ಯನ ಗಲ್ಲಿ ವಾಸಿ
ದಿ. ಆಲೂರು ಪರಮೇಶ್ವರಪ್ಪ ನವರ ಧರ್ಮಪತ್ನಿ

**ಆಲೂರು ಶ್ರೀಮತಿ ನೀಲಮ್ಮ**

ಇವರು ದಿನಾಂಕ : 26.02.2025 ರ ಬುಧವಾರ ರಾತ್ರಿ 7.30 ಗಂಟೆಗೆ ನಿಧನರಾದರು. ಮೃತರಿಗೆ 85 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 27.02.2025ರ ಗುರುವಾರ ಮಧ್ಯಾಹ್ನ 12 ಗಂಟೆಗೆ ಬೂದಾಳ್ ರಸ್ತೆಯ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ : ಮಗ - ಪ್ರಕಾಶ್ ಪಿ. ಆಲೂರು, ಆಲೂರು ಕುಟುಂಬಸ್ಥರು. 70191 61726

### ಆನೆಕೊಂಡದ ರೇವಕ್ಕರ ಬಸವರಾಜಪ್ಪ ನಿಧನ



ದಾವಣಗೆರೆ ವಿನಾಯಕ ಬಡಾವಣೆ
ವಿದ್ಯಾನಗರ ವಾಸಿ

**ಶ್ರೀ ಎ.ಆರ್. ಬಸವರಾಜಪ್ಪ**

ಇವರು ದಿನಾಂಕ 25.02.2025ರ ಮಂಗಳವಾರ ಬೆಳಿಗ್ಗೆ 6.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ 76 ವರ್ಷ ವಯಸ್ಸಾಗಿತ್ತು. ಪತ್ನಿ, ಮಕ್ಕಳು, ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 28.02.2025ರ ಶುಕ್ರವಾರ ಬೆಳಿಗ್ಗೆ 11ಕ್ಕೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬದವರು : ರೇವಕ್ಕಳ ವಂಶಸ್ಥರು, ಆನೆಕೊಂಡ

# ಮಲೇಬೆನ್ನೂರು : ಶಿವರಾತ್ರಿ ಆಚರಣೆ

## ಯಲವಟ್ಟಿ ಮಠದಲ್ಲಿ ವಿಶೇಷ ಪೂಜೆ, ಜಿಗಳಿ ಕ್ಯಾಂಪಿನಲ್ಲಿ ಅನ್ನ ಸಂತರ್ಪಣೆ



ಮಲೇಬೆನ್ನೂರು, ಫೆ. 26- ಮಲೇಬೆನ್ನೂರು ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಮಹಾಶಿವರಾತ್ರಿ ಪೂಜಾ ಕಾರ್ಯಕ್ರಮಗಳು ಶ್ರದ್ಧಾ-ಭಕ್ತಿಯಿಂದ ಜರುಗಿದವು.

ಪಟ್ಟಣದ ಹೊರವಲಯದಲ್ಲಿರುವ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಏರ್ಪಡಿಸಿದ್ದ ಸಾಮೂಹಿಕ ಶಿವಲಿಂಗ ಪೂಜೆಯಲ್ಲಿ ಸಾವಿರಾರು ಜನ ಭಾಗಿಯಾಗಿದ್ದರು.

ಪ್ರಯಾಗ್‌ರಾಜ್‌ನಲ್ಲಿ ತ್ರಿವೇಣಿ ಸಂಗಮದಿಂದ ಪವಿತ್ರ ಜಲದಿಂದ ಅಭಿಷೇಕ, ಪೂಜೆ ಸಲ್ಲಿಸಲಾಯಿತು. ದೇವಸ್ಥಾನದ ಪ್ರಧಾನ ಅರ್ಚಕ ಬೆನಕಯ್ಯ ಶಾಸ್ತ್ರಿಗಳ ನೇತೃತ್ವದಲ್ಲಿ ಈ ಪೂಜಾ ಕಾರ್ಯಕ್ರಮಗಳು ನಡೆದವು.

ಶಿವರಾತ್ರಿ ಅಂಗವಾಗಿ ಭಕ್ತರಿಗೆ ಪ್ರಸಾದವಾಗಿ ಹಣ್ಣು, ಉಪ್ಪಿಟ್ಟು ನೀಡಲಾಯಿತು. ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ದ್ವಾದಶ ಜೋತಿರ್ಲಿಂಗಗಳ ದರ್ಶನದ ಏರ್ಪಾಡಾಗಿತ್ತು. ಪಟ್ಟಣದ ಶ್ರೀ ಕಲ್ಲೇಶ್ವರ ದೇವಸ್ಥಾನ ಮತ್ತು ಬಸವೇಶ್ವರ ದೇವಸ್ಥಾನದಲ್ಲಿ ಭಕ್ತರು ವಿಶೇಷ ಪೂಜೆ ಸಲ್ಲಿಸಿದರು.

ಯಲವಟ್ಟಿಯ ಶ್ರೀ ಗುರು ಸಿದ್ಧಾಶ್ರಮದಲ್ಲಿ ಮಹಾಶಿವರಾತ್ರಿ ಪೂಜಾ ಕಾರ್ಯಕ್ರಮಗಳನ್ನು ಶ್ರೀ ಯೋಗಾನಂದ ಸ್ವಾಮೀಜಿ ಭಕ್ತರ ಸಮ್ಮುಖದಲ್ಲಿ ನಡೆಸಿಕೊಟ್ಟರು. ಶಿವಭಜನೆ ಹಾಗೂ ಮಹಾ ಮಂಗಳಾರತಿ ಬಳಿಕ ಭಕ್ತರಿಗೆ ಹಣ್ಣು, ಕೇಸರಿಬಾತ್, ಉಪ್ಪಿಟ್ಟನ್ನು ಪ್ರಸಾದವಾಗಿ ವಿತರಿಸಲಾಯಿತು.

ವಿನಾಯಕ ನಗರ (ಜಿಗಳಿ ಕ್ಯಾಂಪ್) ಕ್ಯಾಂಪಿನಲ್ಲಿರುವ ಶ್ರೀ ಗುಂಡಪ್ಪಯ್ಯ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಅಂಗವಾಗಿ ಅಭಿಷೇಕ ಪೂಜೆ ಹಾಗೂ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

ಕುಂಬಳೂರು ಗ್ರಾಮದಲ್ಲಿರುವ ದೇವಸ್ಥಾನದಲ್ಲೂ ವಿಶೇಷ ಪೂಜೆಗಳು ನಡೆದವು. ಜಿಗಳಿ ಗ್ರಾಮದ ಶ್ರೀ ಕಲ್ಲೇಶ್ವರ ದೇವಸ್ಥಾನ ಮತ್ತು ಸಿಬಾರ ಕಟ್ಟೆ ಹಾಗೂ ಮಹೇಶ್ವರ ದೇವಸ್ಥಾನಗಳಲ್ಲಿ ಬುಧವಾರ ರಾತ್ರಿ ಜಾಗರಣೆ ಭಜನೆ ನಡೆಯಿತು. ಗುರುವಾರ ಮೂರು ಕಡೆಗಳಲ್ಲಿ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

# ಕಲ್ಮಠ ಅವರಿಗೆ ಧಾರ್ಮಿಕ ಶಿರೋರತ್ನ ಪ್ರಶಸ್ತಿ



**ಹರಪನಹಳ್ಳಿ**

ಹರಪನಹಳ್ಳಿ, ಫೆ. 26 - ತಾಲ್ಲೂಕಿನ ನೀಲಗುಂದದ ಗುಡ್ಡದ ಸಂಸ್ಥಾನ ಜಂಗಮಪೀಠದಿಂದ ಜರುಗಿದ ಜಂಗಮ ಜಾತ್ರೆಯ ಭಕ್ತ ಹಿತಚಿಂತನಾ ಸಮಾರಂಭದಲ್ಲಿ ಧಾರ್ಮಿಕ ಸಾಮಾಜಿಕ ಸೇವೆ ಪರಿಗಣಿಸಿ ಚಿರಸ್ತಿಹಳ್ಳಿ ಮಲ್ಲಿಕಾರ್ಜುನಸ್ವಾಮಿ ಕಲ್ಮಠ ಅವರಿಗೆ ಶ್ರೀ ಚನ್ನಬಸವ ಶಿವಯೋಗಿ ಮಹಾಸ್ವಾಮಿಗಳು 'ಧಾರ್ಮಿಕ ಶಿರೋರತ್ನ' ಪ್ರಶಸ್ತಿ ಪ್ರದಾನ ಮಾಡಿದರು.

ಅಡವಿಮಲ್ಲನಕೇರಿ ಶ್ರೀ ಹೊಳಲು ಶ್ರೀ ಹಾಗೂ ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಬಿ.ರಾಜಕುಮಾರ್, ರೈತ ಮುಖಂಡ ಎಚ್.ಎಂ.ಮಹೇಶ್ವರಸ್ವಾಮಿ, ಸಾಹಿತಿ ಜಗನ್ನಾಥ್, ಪಂಡಿತ್ ಮಹಾಂತೇಶ್ ಶಾಸ್ತ್ರಿಗಳು, ಚಂದ್ರಶೇಖರ, ಕಲ್ಲಳ್ಳಿ ಗೋಣೆಪ್ಪ, ಶಿಕ್ಷಕರಾದ ಮಹಾಂತೇಶ್, ಕಿರಣ ಎಂ., ಮಂಜುನಾಥಸ್ವಾಮಿ, ಎಸ್.ಸಿದ್ಧಲಿಂಗಪ್ಪ ಇತರರು ಇದ್ದರು.

# ಲಿಂಗ ಕಟ್ಟುವವರಷ್ಟೇ ಅಲ್ಲ, ಪೂಜಿಸುವವರೂ ವೀರಶೈವರೇ

## ಲಿಂಗದಹಳ್ಳಿಯಲ್ಲಿ ಬೃಹತ್ ಸ್ಪಟಿಕ ಲಿಂಗ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ರಟ್ಟಿಹಳ್ಳಿ ಶಿವಲಿಂಗ ಶ್ರೀಗಳು



ರಾಣೇಬೆನ್ನೂರು,ಫೆ.26- ಕೊರಳಲ್ಲಿ ಲಿಂಗ ಕಟ್ಟಿದವರಷ್ಟೇ ವೀರಶೈವರಲ್ಲ, ಲಿಂಗವನ್ನು ಪೂಜಿಸುವವರೆಲ್ಲ ವೀರಶೈವರೇ ಆಗಿದ್ದಾರೆ ಎಂದು ರಟ್ಟಿಹಳ್ಳಿ ಕಬ್ಬಿಣಕಂತಿ ಮಠದ ಶಿವಲಿಂಗ ಶ್ರೀಗಳು ನುಡಿದರು.

ಶ್ರೀ ಗಳು ತಾಲ್ಲೂಕಿನ ಲಿಂಗದಹಳ್ಳಿ ಗ್ರಾಮದ ರಂಭಾಪುರಿ ಶಾಖಾ ಹಿರೇಮಠದಲ್ಲಿ ಬೃಹತ್ ಸ್ಪಟಿಕ ಲಿಂಗ ಪ್ರತಿಷ್ಠಾಪನೆ ಸಮಾರಂಭದ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ರಾಮನನ್ನು ಪೂಜಿಸುವವರು ಪೂಜಿಸಲಿ ಆದರೆ, ವೀರಶೈವ ಧರ್ಮ ಪುರಾತನವಾದುದು. ಮೌಲ್ಯಗಳನ್ನು ಅನುಷ್ಠಾನ ಮಾಡುವುದೇ ವೀರಶೈವ ಧರ್ಮದ ಆಚರಣೆ. ವೀರಶೈವ ಧರ್ಮದಲ್ಲಿ ಮಗುವು ತಾಯಿ ಗರ್ಭದಲ್ಲಿದ್ದಾಗಲೇ ಲಿಂಗಧಾರಣೆ ಮಾಡಲಾಗುತ್ತೆ. ಅಂದರೆ ಅದರ ಬದುಕು ಲಿಂಗದೊಂದಿಗೆ ಪ್ರಾರಂಭಗೊಳ್ಳುತ್ತದೆ. ನಾವ್ಯಾರು ದೇವರನ್ನು ನೋಡಿಲ್ಲ, ಆದರೆ ಅವನ ಮೇಲಿನ ಶ್ರದ್ಧೆ, ನಂಬಿಕೆಯಿಂದಾಗಿ ಅಂಗಡಿಯಲ್ಲಿನ ಬಾಳೆಹಣ್ಣು ಪ್ರಸಾದವಾಗುತ್ತದೆ. ಈ ನಂಬಿಕೆ ಸಮಾಜದಲ್ಲಿ ಶಾಂತಿ, ನೆಮ್ಮದಿ ಹಾಗೂ ಭಾವೈಕ್ಯತೆ ಬೆಳೆಸುತ್ತದೆ ಎಂದು ಶ್ರೀಗಳು ನುಡಿದರು.

ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯ ಸಂತೋಷ ಪಾಟೀಲ ಮಾತನಾಡಿ, ನಾನು ಪ್ರಯಾಗರಾಜ್‌ಗೆ ಹೋಗಿ ನಂತರ ತ್ರಯಂಬಕ ಲಿಂಗ ದರ್ಶನಕ್ಕೆ ತೆರಳಿದ್ದೆ, ಆಗ ಅಲ್ಲಿಗೆ ಜಯ ಶ್ರೀರಾಮ ಎಂದು ಘೋಷಣೆ ಕೂಗುತ್ತ ಯುವಕರ ಗುಂಪು ಬಂದಿತು. ಯಾವ ದೇವರಿಗೆ ಯಾವ ಜಯ ಘೋಷ ಮಾಡಬೇಕು ಎನ್ನುವಷ್ಟು ತಿಳಿಯದ ಧಾರ್ಮಿಕ ಕತ್ತಲೆಯಲ್ಲಿ ನಾವಿದ್ದೇವೆ ಎನಿಸಿತು. ಹಾಗಾಗಿ ನಮ್ಮಲ್ಲಿರುವ ಇಂತಹ ಕತ್ತಲೆಯನ್ನು ದೂರಮಾಡಿ, ಬೆಳಕು ತರಲು ನಮ್ಮ ಮಠಗಳು, ಸ್ವಾಮೀಜಿಗಳು ಶ್ರಮಿಸುತ್ತಿದ್ದಾರೆ. ವಿಶ್ವದಲ್ಲಿಯೇ ದೊಡ್ಡದಾದ ಸ್ಪಟಿಕ ಲಿಂಗ ಇರುವ ಈ ಕ್ಷೇತ್ರ ಸಮಸ್ಥ ಜನರ ಬದುಕನ್ನು ಹಸನು ಮಾಡಲಿದೆ ಎಂದರು.

ಪೀಠಾಧಿಪತಿ ವೀರಭದ್ರ ಶ್ರೀಗಳು ಸಾನಿಧ್ಯ ವಹಿಸಿದ್ದರು. ಸಾಲೂರ ಗುರುಲಿಂಗ ಜಂಗಮಶ್ರೀ ಗಳು, ತಾಪಂ ಮಾಜಿ ಅಧ್ಯಕ್ಷ ರವಿ ಪಾಟೀಲ, ಕೊಟ್ರೇಶ ಎಮ್ಮಿ, ಶೇಖಪ್ಪ ಬೇಡರ, ರೈತ ಸಂಘದ ಅಧ್ಯಕ್ಷ ಹನುಮಂತಪ್ಪ ಕಬ್ಬಾರ, ಶಿವನಗೌಡ ಲಿಂಗದಹಳ್ಳಿ, ನಿತ್ಯಾನಂದ ಕುಂದಾಪುರ ಮತ್ತಿತರರಿದ್ದರು.

# ಕೊಟ್ಟೂರಿನಲ್ಲಿ ಸಂಭ್ರಮದ ಶಿವರಾತ್ರಿ



ಕೊಟ್ಟೂರು, ಫೆ. 26 - ಮಹಾಶಿವರಾತ್ರಿಯ ದಿನವಾದ ಬುಧವಾರದಂದು ಕೊಟ್ಟೂರಿನ ಗದ್ದಿಕಲ್ಲೇಶ್ವರ ಈಶ್ವರ ಲಿಂಗ ಮೂರ್ತಿಗೆ ಮಹಿಳೆಯರು ಮತ್ತು ಪುರುಷರು ಪೂಜೆ ಅಭಿಷೇಕ ನೆರವೇರಿಸಿ ಭಕ್ತಿ ಸಮರ್ಪಿಸಿದರು.

ಮಹಾಶಿವರಾತ್ರಿ ಹಬ್ಬವು ಇದೀಗ ಕೊಟ್ಟೂರಿನಲ್ಲಿ ಸಾಗಿರುವ ಕೊಟ್ಟೂರೇಶ್ವರ ಜಾತ್ರೆಯ ಸಡಗರ ಸಂಭ್ರಮಕ್ಕೆ ಮತ್ತಷ್ಟು ಮೆರಗು ತಂದಿದೆ. ಕೊಟ್ಟೂರೇಶ್ವರನ ಜಪ-ತಪ, ಹಾಡುಗಳ ಮಾರ್ಧನಿ ಪಟ್ಟಣದಲ್ಲೆಡೆ ಕಳೆದ ವಾರದಿಂದ ಮೊಳಗುತ್ತಿದ್ದರೆ, ಕೊಟ್ಟೂರಿನಲ್ಲಿ ಇದರೊಟ್ಟಿಗೆ ಶಿವನಾಮ ಜಪ, ಓಂ ನಮಃ ಶಿವಾಯ ಮಂತ್ರಗಳ ಘೋಷಣೆ ಕೇಳಿ ಬಂದು ಆಸ್ತಿಕ ಭಕ್ತರ ಧಾರ್ಮಿಕ ಕೈಂಕರ್ಯಗಳಿಗೆ ಮುದ ನೀಡಿತು.

ಮಹಾಶಿವರಾತ್ರಿ ಅಂಗವಾಗಿ ಸಾವಿರಾರು ಭಕ್ತರು ಎಂದಿನಂತೆ ಉದ್ದನೆಯ ಸಾಲಿನೊಂದಿಗೆ ಕೊಟ್ಟೂರೇಶ್ವರ ಸ್ವಾಮಿಯ ದರ್ಶನಕ್ಕೆ ಆಗಮಿಸಿ ಭಕ್ತಿ ಸಮರ್ಪಿಸವುದು ಬೆಳಗಿನಿಂದ ನಡೆಯುತ್ತಿದೆ. ಬೆಳಗಿನ ಜಾವ ಶ್ರೀ ಕೊಟ್ಟೂರೇಶ್ವರ ಸ್ವಾಮಿಗೆ ಮಹಾರುದ್ರಾಭಿಷೇಕದೊಂದಿಗೆ ಶಿವರಾತ್ರಿ ಆಚರಣೆಗೊಂಡಿತು. ಶ್ರೀ ಸ್ವಾಮಿಯ ಮೂರು ಪ್ರಮುಖ ಮಠಗಳಾದ ಹಿರೇಮಠ, ತೊಟ್ಟಿಲು ಮಠ, ಗಚ್ಚಿನಮಠಗಳಿಗೆ ದಂಡು ದಂಡಾಗಿ ಭಕ್ತರು ತೆರಳಿ ಪೂಜೆ ಸಲ್ಲಿಸಿದರು.

ಇಲ್ಲಿನ ಈಶ್ವರ ದೇವಸ್ಥಾನಗಳಾಗಿರುವ ಗದ್ದಿಕಲ್ಲೇಶ್ವರ, ಮಳೆಮಲ್ಲೇಶ್ವರ, ಸಿರಿಮಠಲಿಂಗೇಶ್ವರ, ಚಂದ್ರಮೌಳೇಶ್ವರ, ಮಾರ್ಕಂಡೇಶ್ವರ, 108 ಶಿವಲಿಂಗಗಳ ದೇವಸ್ಥಾನ, ಸೋಮಲಿಂಗೇಶ್ವರ, ರಾಮಲಿಂಗೇಶ್ವರ, ಹ್ಯಾಳ್ಯಾದ ಬಳಿಯ ಪಂಪಾಪತಿ ಪತೇಶ್ವರ, ಅಂಬಳಿಯ ಕಲ್ಲೇಶ್ವರ, ಗುಡಿಗಳಿಗೆ ಭಕ್ತರು ಬೆಳಗ್ಗಿನಿಂದಲೇ ತೆರಳಿ ನಿರಂತರ ರುದ್ರಾಭಿಷೇಕ ಮತ್ತು ವಿಶೇಷ ಪೂಜೆಗಳನ್ನು ಕುಟುಂಬ ಸಮೇತರಾಗಿ ಮಾಡಿ ಸೇವೆ ಸಲ್ಲಿಸಿ ಭಕ್ತಿ ಸಮರ್ಪಿಸಿದರು. ಪಟ್ಟಣದ ಗದ್ದಿ ಕಲ್ಲೇಶ್ವರ ದೇವಸ್ಥಾನದ ಈಶ್ವರ ಲಿಂಗಮೂರ್ತಿಗೆ ಬುಧವಾರ ರಾತ್ರಿಯುದ್ದಕ್ಕೂ ಮಹಾರುದ್ರಾಭಿಷೇಕ ಕೈಂಕರ್ಯ ನಿರಂತರ ಸಾಗಿದೆ.

# ಹರಿಹರ : ದ್ವಾದಶ ಜ್ಯೋತಿರ್ಲಿಂಗಗಳ ಮೆರವಣಿಗೆ



ಹರಿಹರ, ಫೆ. 26 - ನಗರದ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಿಂದ ವತಿಯಿಂದ ಮಹಾ ಶಿವರಾತ್ರಿ ಪ್ರಯುಕ್ತ ಬೆಳಿಗ್ಗೆ ಶಿವ ಧ್ವಜಾರೋಹಣ, ಸಹಸ್ರಲಿಂಗ ದರ್ಶನ, ದ್ವಾದಶ ಜ್ಯೋತಿರ್ಲಿಂಗಗಳ ಉತ್ಸವದ ಮೆರವಣಿಗೆ ನಡೆಸಲಾಯಿತು.

ಮೆರವಣಿಗೆಗೆ ಶಾಸಕ ಬಿ.ಪಿ. ಹರೀಶ್, ನಗರಸಭೆ ಅಧ್ಯಕ್ಷರಾದ ಕವಿತಾ ಮಾರುತಿ ಬೇಡರ್, ಉಪಾಧ್ಯಕ್ಷ ಗುತ್ತೂರು ಜಂಬಣ್ಣ, ಸದಸ್ಯ ಮುಜಾಮಿಲ್ ಬಿಲ್ಲು, ಮಾಜೇನಹಳ್ಳಿ ಗ್ರಾಮದೇವತೆ ದೇವಸ್ಥಾನ ಸಮಿತಿಯ ಅಧ್ಯಕ್ಷ ಹಲಸಬಾಳು ಶಿವಾನಂದಪ್ಪ ಅವರು ಚಾಲನೆ ನೀಡಿದರು.

ಮೆರವಣಿಗೆಯು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಮುಂಭಾಗದಿಂದ ಪ್ರಾರಂಭಗೊಂಡು ಗಾಂಧಿ ವೃತ್ತ, ಮುಖ್ಯರಸ್ತೆ, ರಾಣಿ ಚೆನ್ನಮ್ಮ ವೃತ್ತ, ದೇವಸ್ಥಾನ ರಸ್ತೆ, ಟಿ.ಬಿ. ರಸ್ತೆ, ಹಳೆ ಪಿ.ಬಿ. ರಸ್ತೆಯಲ್ಲಿ ಸಾಗಿ ಪುನಃ ದೇವಾಲಯದ ಆವರಣದಲ್ಲಿ ಅಂತ್ಯಗೊಂಡಿತು.

ಮೆರವಣಿಗೆಯಲ್ಲಿ ಕಾರಿನ ಮೇಲೆ ಶಿವಲಿಂಗದ ಮೂರ್ತಿಯನ್ನು ಪ್ರತಿಷ್ಠಾಪಿಸಿ ಸಮಾಳ, ಶ್ರೀ ಹರಿಹರೇಶ್ವರ ಮಹಿಳಾ ಡೊಳ್ಳು ಕುಣಿತ, ಬ್ಯಾಂಡ್ ಸೆಟ್ ಸೇರಿದಂತೆ ವಿವಿಧ ಕಲಾ ಮೇಳಗಳು ಪಾಲ್ಗೊಂಡು ಮೆರವಣಿಗೆಗೆ ಮೆರಗನ್ನು ನೀಡಿದವು. ಮೆರವಣಿಗೆ ಮುಗಿದ ನಂತರ ಮಕ್ಕಳಿಂದ ಶಿವಸ್ತುತಿ ನೃತ್ಯ, ವಿಶ್ವ ಶಾಂತಿ ಗಾಗಿ ಧ್ಯಾನ ಮುಂತಾದ ಕಾರ್ಯಕ್ರಮಗಳು ಜರುಗಿದವು.

ಈಶ್ವರೀಯ ವಿಶ್ವವಿದ್ಯಾಲಯದ ಸ್ಥಳೀಯ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಶಿವದೇವಿ ಈ ಎಲ್ಲಾ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.ಬ್ರಹ್ಮಾಕುಮಾರಿ ಅನಸೂಯಾ ಹಾಗೂ ಇತರರು ಹಾಜರಿದ್ದರು.

# ಇನ್ನರ್‌ವ್ಹೀಲ್‌ನಿಂದ ವಿವಿಧ ಸ್ಪರ್ಧೆಗಳು

ದಾವಣಗೆರೆ, ಫೆ. 26- ಇನ್ನರ್ ವ್ಹೀಲ್ ಸಂಸ್ಥೆ ವಿದ್ಯಾನಗರ ವತಿಯಿಂದ ಅಂತರ್ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ಮಹಿಳೆಯರಿಗಾಗಿ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.

ನಮ್ಮ ದೇಶ ಅಭಿವೃದ್ಧಿ ಹೊಂದಲು ಮಹಿಳೆಯರ ಪಾತ್ರವೇನು ವಿಷಯ ಕುರಿತು ಪ್ರಬಂಧ ಸ್ಪರ್ಧೆ, ಬೆಂಕಿ ಇಲ್ಲದ ಅಡುಗೆ ಮಾಡುವ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಆಸಕ್ತರು ನಾಡಿದ್ದು ದಿನಾಂಕ 28ರೊಳಗೆ ಹೆಸರು ನೋಂದಾಯಿಸಬಹುದು ಎಂದು ಪ್ರೇಮಾ ಮಹೇಶ್ವರಪ್ಪ (94810 10502), ಭಾಗ್ಯ ವೀರಣ್ಣ (94484 05066) ತಿಳಿಸಿದ್ದಾರೆ.

# ನಗರದಲ್ಲಿ ಇಂದು ಅನ್ನ ಸಂತರ್ಪಣೆ

ಕೆಟಿಜೆ ನಗರ 2ನೇ ಮುಖ್ಯ ರಸ್ತೆ, 14ನೇ ತಿರುವಿನಲ್ಲಿರುವ ಶ್ರೀ ನೀಲಕಂಠೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಶಿವರಾತ್ರಿ ಪ್ರಯುಕ್ತ ಇಂದು ಮಧ್ಯಾಹ್ನ 12.30ಕ್ಕೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ ಎಂದು ಶ್ರೀ ಕುರುಹಿನಶೆಟ್ಟಿ ನೇಕಾರ ಸಮಾಜ ಸಂಘದ ಪದಾಧಿಕಾರಿಗಳು ತಿಳಿಸಿದ್ದಾರೆ.

# ಹರಿಹರದಲ್ಲಿ ಶ್ರದ್ಧಾ-ಭಕ್ತಿಯ ಮಹಾಶಿವರಾತ್ರಿ ಆಚರಣೆ



ಹರಿಹರ, ಫೆ.26- ನಗರದ ಶ್ರೀ ಹರಿಹರೇಶ್ವರ ಸ್ವಾಮಿ, ನೂರ ಎಂಟು ಲಿಂಗೇಶ್ವರ ಸ್ವಾಮಿ, ಹರ ಮಠದ ಶಿವಲಿಂಗೇಶ್ವರ ಸ್ವಾಮಿ, ನೂರಾ ಎಂಟು ಲಿಂಗೇಶ್ವರ ಸ್ವಾಮಿ ದೇವಸ್ಥಾನ ಹಿಂಬದಿಯ ಕುಂಬಾಳೇಶ್ವರ ಸ್ವಾಮಿ, ಜೋಡು ಬಸವೇಶ್ವರ ಸ್ವಾಮಿ, ಲಕ್ಷ್ಮಿ ವೆಂಕಟೇಶ್ವರ ಸ್ವಾಮಿ, ಸಹಸ್ರಾರ್ಜುನ ವೃತ್ತದ ಹತ್ತಿರದಲ್ಲಿರುವ ಅಮೃತೇಶ್ವರ ಸ್ವಾಮಿ, ಬಸವೇಶ್ವರ ಸ್ವಾಮಿ, ಮೂಕ ಬಸವೇಶ್ವರ ಸ್ವಾಮಿ, ಪೇಟೆ ಆಂಜನೇಯ ಸ್ವಾಮಿ, ಸಂಗಮೇಶ್ವರ ಸ್ವಾಮಿ, ರಾಘವೇಂದ್ರ ಸ್ವಾಮಿ, ವೀರಭದ್ರೇಶ್ವರ ಸ್ವಾಮಿ, ಸೇರಿದಂತೆ ವಿವಿಧ ದೇವಸ್ಥಾನಗಳಲ್ಲಿ, ವಿಶೇಷ ರುದ್ರಾಭಿಷೇಕ, ಅಲಂಕಾರ, ಮಹಾಮಂಗಳಾರತಿ ಮುಂತಾದ ಪೂಜಾ ಕಾರ್ಯಗಳು ಶ್ರದ್ಧಾ - ಭಕ್ತಿಯಿಂದ ನಡೆದವು.

ಇತಿಹಾಸ ಪ್ರಸಿದ್ಧ ಶ್ರೀ ಹರಿಹರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಸರತಿ ಸಾಲಿನಲ್ಲಿ ನಿಂತು ಬಿಸಿಲಿನ ತಾಪವನ್ನು ಲೆಕ್ಕಿಸದೆ ಮತ್ತು ಸಂಜೆಯಿಂದ ತಡ ರಾತ್ರಿಯವರೆಗೆ ಸ್ವಾಮಿ ದರ್ಶನ ಮಾಡಿ ತೆಂಗಿನ ಕಾಯಿ, ಬಾಳೆಹಣ್ಣು, ಬಿಲ್ವಪತ್ರೆ, ತುಳಸಿ ಪತ್ರೆ, ವಿವಿಧ ಬಗೆಯ ಪುಷ್ಪಗಳು, ದ್ವೀಪಗಳ ಬತ್ತಿ ಸಮರ್ಪಿಸಿ ಶಿವನನ್ನು ಆರಾಧಿಸಿದರು.

ನಾರಾಯಣ ಜೋಯಿಸರು, ಹರಿಶಂಕರ್ ಜೋಯಿಸರು, ದೇವಸ್ಥಾನದ ಪ್ರಧಾನ ಅರ್ಚಕರಾದ ಶ್ರೀನಿವಾಸ್ ಮೂರ್ತಿ, ಗುರುಪ್ರಸಾದ್, ಚಿದಂಬರ ಜೋಯಿಸರು, ಲಕ್ಷ್ಮೀಕಾಂತ ಜೋಯಿಸರು, ರಾಘವ ಗುರುಪ್ರಸಾದ್, ಇತರರು ಪೂಜಾ ಕಾರ್ಯದಲ್ಲಿ ನಿರತರಾಗಿದ್ದರು.

ನಗರದಲ್ಲಿನ ಭಕ್ತರು ಮನೆಯಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಿ, ಅಭಿಷೇಕ ಪುಷ್ಪಾರ್ಚನೆ, ಬಿಲ್ವಾರ್ಚನೆ ಸೇರಿದಂತೆ ವಿವಿಧ ಬಗೆಯ ಹಣ್ಣುಗಳ ನೈವೇದ್ಯದ ಜೊತೆಗೆ ದೇವರ ಆರಾಧನೆಯೊಂದಿಗೆ ಜಾಗರಣೆ ಮಾಡಿದರು.

ಹೊಸಭರಂಪುರ ಬಡಾವಣೆಯ ಶ್ರೀ ನೂರಾ ಎಂಟು ಲಿಂಗೇಶ್ವರ ದೇವಸ್ಥಾನದಲ್ಲಿ ಸೊಲ್ಲಾಪುರದ ಶ್ರೀ ಶರಣ ಬಸವಲಿಂಗ ಸ್ವಾಮಿಗಳ ನೇತೃತ್ವದಲ್ಲಿ ನೂರ ಎಂಟು ಲಿಂಗೇಶ್ವರ ಸ್ವಾಮಿಗೆ ಅಭಿಷೇಕ, ಅಲಂಕಾರ ಮಹಾಮಂಗಳಾರತಿ ಮುಂತಾದ ಪೂಜೆಗಳನ್ನು ಸಮರ್ಪಿಸಿದರು.

ಹಲವಾರು ದೇವಸ್ಥಾನಗಳಲ್ಲಿ ನಡೆದ ರುದ್ರಾಭಿಷೇಕಕ್ಕೆ ಮಹಾ ತಪಸ್ವಿ ಸೇವಾ ಫೌಂಡೇಷನ್ ವತಿಯಿಂದ ದೇವಸ್ಥಾನಗಳಿಗೆ ಗಂಗಾಜಲವನ್ನು ಸಮರ್ಪಿಸಿ, ಭಕ್ತಿ ಅರ್ಪಿಸಿದರು. ವಿವಿಧ ಸಂಘ, ಸಂಸ್ಥೆಯವರು ಭಕ್ತರಿಗೆ ಕುಡಿಯುವ ನೀರು, ಪ್ರಸಾದದ ವ್ಯವಸ್ಥೆ ಮಾಡಿದ್ದರು.

ಈ ಸಂದರ್ಭದಲ್ಲಿ ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ನಗರಸಭೆ ಅಧ್ಯಕ್ಷೆ ಕವಿತಾ ಮಾರುತಿ ಬೇಡರ್, ಉಪಾಧ್ಯಕ್ಷ ಜಂಬಣ್ಣ ಗುತ್ತೂರು, ಜಿ.ಪಂ. ಮಾಜಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ನಗರಸಭೆ ಸದಸ್ಯರಾದ ಕೆ.ಜಿ. ಸಿದ್ದೇಶ್, ಶಂಕರ್ ಖಟಾವ್ಕರ್, ಎ. ವಾಮನಮೂರ್ತಿ, ದಿನೇಶ್ ಬಾಬು, ಉಷಾ ಮಂಜುನಾಥ್, ಲಕ್ಷ್ಮಿ ಮೋಹನ್ ದುರುಗೋಜಿ, ನಾಮನಿರ್ದೇಶನ ಸದಸ್ಯ ಕೆ.ಬಿ. ರಾಜಶೇಖರ್, ಗಜಾನನ ಯುವಕ ಸಂಘದ ಮುಖ್ಯಸ್ಥ ದಿನೇಶ್ ಕೊಣ್ಣೂರ, ವೆಂಕಟೇಶ್ವರ ದೇವಸ್ಥಾದ ವೈ.ಲಕ್ಷ್ಮಣ, ಅಮೃತೇಶ್ವರ ದೇವಸ್ಥಾನ ಸಮಿತಿಯ ಕಾಳಪ್ಪ ಬೊಂಗಾಳೆ, ರಾಘವೇಂದ್ರ, ಜ್ಞಾನೇಶ್ವರ, ಅರುಣ್ ಕುಮಾರ್, ಪತ್ರಕರ್ತ ಎಂ. ಚಿದಾನಂದ ಕಂಚಿಕೇರಿ. ನಾಗರಾಜ್ ಬಿರ್ಲಾ, ವಿನಾಯಕ ಆರಾಧ್ಯಮಠ, ವಿಜಯ ದಾವಣಗೆರೆ ಇತರರು ಹಾಜರಿದ್ದರು.

# ಬಸವೇಶ್ವರ ವೈದ್ಯ ಕಾಲೇಜಿಗೆ ರ್‍ಯಾಂಕ್



ಚಿತ್ರದುರ್ಗ, ಫೆ. 26-ವೈದ್ಯಕೀಯ ಪರೀಕ್ಷೆಯಲ್ಲಿ ನಗರದ ಬಸವೇಶ್ವರ ವೈದ್ಯಕೀಯ ಮಹಾವಿದ್ಯಾಲಯಕ್ಕೆ ಏಳು ರ್‍ಯಾಂಕ್‌ಗಳು ಲಭಿಸಿವೆ.

ಸ್ನಾತಕೋತ್ತರ ವಿಭಾಗದಲ್ಲಿ ಡಾ. ಅಪೂರ್ವ ಆರ್. ಶಾಹಪುರ 9ನೇ ರ್‍ಯಾಂಕ್, ಡಾ. ಮೇಘನಾ ಎಸ್.ಎ. 8ನೇ ರ್‍ಯಾಂಕ್, ಡಾ. ಮೋನಿಕಾ ಎಂ. 6ನೇ ರ್‍ಯಾಂಕ್, ಡಾ. ಮಧು ಜಿ.ಆರ್. 9ನೇ ರ್‍ಯಾಂಕ್, ಡಾ. ಐಶ್ವರ್ಯ ಪಿ. ಜೋಗ್ 10ನೇ ರ್‍ಯಾಂಕ್ ಮತ್ತು ಸ್ನಾತಕ (ಯುಜಿ) ವಿಭಾಗದಲ್ಲಿ, ಹೆಗ್ಡೆ ಅನುಷಾ ರಘುನಾಥ್ 3ನೇ ರ್‍ಯಾಂಕ್, ಸಮರ್ಥ ಕುಲಕರ್ಣಿ 7ನೇ ರ್‍ಯಾಂಕ್, ಚೈತ್ರಾ ಎಸ್. ಹೊಳೆಪ್ಪಗೋಳ್ 8ನೇ ರ್‍ಯಾಂಕ್ ಗಳಿಸಿರುತ್ತಾರೆ ಎಂದು ಕಾಲೇಜಿನ ಡೀನ್ ಡಾ.ಪ್ರಶಾಂತ್ ತಿಳಿಸಿದ್ದಾರೆ.

# ತರಳಬಾಳು ಹುಣ್ಣಿಮೆ : ಯಶಸ್ವಿಗೆ ಶ್ರಮಿಸಿದ ಕಾರ್ಯಕರ್ತರಿಗೆ ಅಭಿನಂದಿಸಲು ಸಭೆ

ದಾವಣಗೆರೆ, ಫೆ. 26 -ಭರಮಸಾಗರದಲ್ಲಿ ಈಚೆಗೆ ನಡೆದ ತರಳಬಾಳು ಹುಣ್ಣಿಮೆ ಮಹೋತ್ಸವದ ಯಶಸ್ಸಿಗೆ ಶ್ರಮಿಸಿದ ಎಲ್ಲಾ ಸಮಿತಿ ಮತ್ತು ಕಾರ್ಯಕರ್ತರನ್ನು ಅಭಿನಂದಿಸಲು ನಾಡಿದ್ದು ದಿನಾಂಕ 28 ರ ಶುಕ್ರವಾರ ಬೆಳಿಗ್ಗೆ 11ಕ್ಕೆ ಭರಮಸಾಗರದ ನಿರಂಜನಮೂರ್ತಿಯವರ ಕಲ್ಯಾಣ ಮಂಟಪದಲ್ಲಿ ಶ್ರೀ ಜಗದ್ಗುರುಗಳವರ ಸಮ್ಮುಖದಲ್ಲಿ ಸಭೆಯನ್ನು ಕರೆಯಲಾಗಿದೆ.

# ಅಸ್ತಿತ್ವಕ್ಕಾಗಿ ಹೆಣಗಾಡುತ್ತಿರುವ ಸರ್ಕಾರಿ ಶಾಲೆಗಳು

## ವಿಜ್ಞಾನ ವಸ್ತು ಪ್ರದರ್ಶನ, ಬೀಳ್ಕೊಡುಗೆ ಸಮಾರಂಭದಲ್ಲಿ ಡಾ.ಎ.ಬಿ. ರಾಮಚಂದ್ರಪ್ಪ ಅಭಿಮತ



ಚನ್ನಗಿರಿ, ಫೆ.26- ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲೆಗಳು ತಮ್ಮ ಅಸ್ತಿತ್ವ ಉಳಿಸಿಕೊಳ್ಳುವಲ್ಲಿ ಹೆಣಗಾಡುತ್ತಿವೆ ಎಂದು ಹಿರಿಯ ಸಾಹಿತಿ ಡಾ.ಎ.ಬಿ. ರಾಮಚಂದ್ರಪ್ಪ ತಿಳಿಸಿದರು.

ಸಮೀಪದ ಆಗರಬನ್ನಿಹಟ್ಟಿ ಸರ್ಕಾರಿ ಹಿರಿಯ ಉರ್ದು ಪ್ರಾಥಮಿಕ ಶಾಲೆಯಲ್ಲಿ ನಡೆದ 'ವಿಜ್ಞಾನ ವಸ್ತು ಪ್ರದರ್ಶನ' ಮತ್ತು 7ನೇ ತರಗತಿ ಮಕ್ಕಳ ಬೀಳ್ಕೊಡುಗೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಸರ್ಕಾರಿ ಶಾಲೆಗಳು, ಖಾಸಗಿ ಶಾಲೆಯ ಪೈಪೋಟಿಯೊಂದಿಗೆ ಸ್ಪರ್ಧೆಗಿಳಿದು ತಮ್ಮ ಅಸ್ತಿತ್ವ ಉಳಿಸಿಕೊಂಡಿವೆ. ಆದರೂ ವಿದ್ಯಾರ್ಥಿಗಳ ಸಂಖ್ಯೆ ಕ್ಷೀಣಿಸಿದ್ದರಿಂದ ಎಷ್ಟೋ ಶಾಲೆಗಳು ಮುಚ್ಚಲ್ಪಡುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಗುಣಮಟ್ಟದ ಶಿಕ್ಷಣ, ಶಿಸ್ತಿನ ಪಾಠ ಹಾಗೂ ಯಶಸ್ಸಿನ ಗುರಿ ತೋರಿಸುವ ಶಿಕ್ಷಕರು ಸರ್ಕಾರಿ ಶಾಲೆಯಲ್ಲಿದ್ದರೆ ನಿಜಕ್ಕೂ ಸರ್ಕಾರಿ ಶಾಲೆಗಳು ಸಮೃದ್ಧಿಯಾಗುತ್ತವೆ ಮತ್ತು ಖಾಸಗಿ ಶಾಲೆಗಳನ್ನು ಮೀರಿಸುತ್ತವೆ ಎಂದು ಹೇಳಿದರು.

ಆಗರಬನ್ನಿಹಟ್ಟಿಯ ಸರ್ಕಾರಿ ಶಾಲೆ ಉತ್ತಮ ಶಿಕ್ಷಕರನ್ನು ಹೊಂದಿದೆ. ಇಲ್ಲಿನ ಶಿಕ್ಷಕರು, ಎಸ್‌ಡಿಎಂಸಿ ಕಮಿಟಿ ಹಾಗೂ ಗ್ರಾಮಸ್ಥರ ಪರಿಶ್ರಮದಿಂದ ಚನ್ನಗಿರಿಯ ಮಕ್ಕಳು ಇಲ್ಲಿ ಬಂದು ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು.

ಸಾಹಿತಿ ಕೆ. ಸಿರಾಜ್ ಮಾತನಾಡಿ, ವಿಜ್ಞಾನ, ತಂತ್ರಜ್ಞಾನ ಹಾಗೂ ಆಧುನಿಕ ಜೀವನ ಪ್ರೀತಿಸುವ ಓಟದಲ್ಲಿ ಸಂಸ್ಕೃತಿ, ಸಾಮಾಜಿಕ ಚಿಂತನೆ, ಮಾನವೀಯ ಮೌಲ್ಯಗಳ ಸಂಬಂಧಗಳನ್ನು ಮರೆತು ಬಿಟ್ಟಿದ್ದೇವೆ ಎಂದು ಎಚ್ಚರಿಸಿದರು.

ವಿಜ್ಞಾನ ಓಟದ ಭರಾಟೆಯಲ್ಲಿ ಮನೆಯಲ್ಲಿರುವ ಹಿರಿಯರನ್ನು, ಮನೆಯ ಅಕ್ಕಪಕ್ಕದವರನ್ನು, ನಿಶಕ್ತರನ್ನು ನಾವಿಂದು ಕಡೆಗಣಿಸುತ್ತಿದ್ದೇವೆ. ಹಾಗಾಗಿ ಇಂದಿನ ಮಕ್ಕಳಲ್ಲಿ ಧನಾತ್ಮಕ ಶಿಕ್ಷಣವನ್ನು ಪೂರೈಸುವ ಜವಾಬ್ದಾರಿ ಶಿಕ್ಷಕರು ಹಾಗೂ ಪೋಷಕರ ಬಹುದೊಡ್ಡ ಜವಾಬ್ದಾರಿ ಆಗಿದೆ ಎಂದು ಹೇಳಿದರು.

ನಿವೃತ್ತ ಇಂಜಿನಿಯರ್ ಅಬ್ದುಲ್ ರಹೀಂ ಮಾತನಾಡಿ, ಇಂದಿನ ಮಕ್ಕಳು ವಿಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡಲು. ಪ್ರಾಥಮಿಕ ಹಂತದಿಂದಲೇ ಅವರಿಗೆ ವಿಜ್ಞಾನ ಪ್ರಯೋಗಾಲಯದ ವ್ಯವಸ್ಥೆ ಕಲ್ಪಿಸಬೇಕು ಎಂದು ಹೇಳಿದರು.

ಈ ವೇಳೆ ಶಿಕ್ಷಣ ಕ್ಷೇತ್ರದ ಸಮನ್ವಯಾಧಿಕಾರಿ ಡಾ.ಎಸ್. ಶಂಕ್ರಪ್ಪ, ಬಿ.ಕೆ. ರಾಜಪ್ಪ, ಎಸ್.ಡಿ.ಎಂ.ಸಿ. ಅಧ್ಯಕ್ಷ ಮೆಹಬೂಬ್ ಖಾನ್, ತಾಲ್ಲೂಕು ಸರ್ಕಾರಿ ನೌಕರರ ಸಂಘದ ಸದಸ್ಯರಾದ ಶಾಕೀರ್ ಉಲ್ಲಾ ಷರೀಫ್, ನಾಗರಾಜ್, ರಾಮಪ್ಪ, ನಲ್ಲೂರು ಸೈಫುಲ್ಲಾ ಸಾಬ್, ಷಂಷೀರ್ ಖಾನ್, ಅಶ್ಫಾಕ್, ಜಾಬೀರ್, ಮುಹೀ ಬುಲ್ಲಾ ಹಾಗೂ ಶಾಲಾ ಮಕ್ಕಳ ಪೋಷಕರು, ಗ್ರಾಮಸ್ಥರು ಹಾಜರಿದ್ದರು.

# ಸಂಸ್ಕಾರವಂತನು ಏನನ್ನಾದರೂ ಸಾಧಿಸಬಲ್ಲ

## ಹರಿಹರದ ಚಿಂತ ಪ್ರತಿಷ್ಠಾನದ 'ಸಂಸ್ಕೃತಿ - ಸಾಹಿತ್ಯ' ಸಂವಾದದಲ್ಲಿ ಸಾಹಿತಿ ಜಿ.ಕೆ.ಕುಲಕರ್ಣಿ

ಹರಿಹರ, ಫೆ. 26- ಸಂಸ್ಕಾರ ಮತ್ತು ಸಂಸ್ಕೃತಿ ಎಂಬುದು ತುಂಬಾ ವಿಸ್ತಾರವಾಗಿದೆ, ಸಂಸ್ಕೃತಿಯಲ್ಲಿ ಸಾಹಿತ್ಯ, ನಾಟ್ಯ, ನಡವಳಿಕೆ ಎಲ್ಲವೂ ಒಳಗೊಂಡಿದೆ. ಇದನ್ನರಿತವ ಏನಾದರೂ ಸಾಧನೆ ಮಾಡಲು ಸಾಧ್ಯ ಎಂದು ಆರೋಗ್ಯ ಇಲಾಖೆಯ ನಿವೃತ್ತ ಆರೋಗ್ಯ ಶಿಕ್ಷಣಾಧಿಕಾರಿ ಮತ್ತು ಸಾಹಿತಿ ಜಿ.ಕೆ.ಕುಲಕರ್ಣಿ ತಿಳಿಸಿದರು.

ನಗರದ ಚಿಂತನ ಪ್ರತಿಷ್ಠಾನ ಮತ್ತು ಪ್ರಗತಿಪರ ಬರಹಗಾರರ ಒಕ್ಕೂಟ ಚಿಂತನ ಪ್ರತಿಷ್ಠಾನದ ಕಚೇರಿಯಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿ ವಿಷಯದ ಮೇಲೆ ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು.

ನಮ್ಮ ಸಮಾಜ ಪ್ರಗತಿ ಸಾಧಿಸಲು ಸಂಸ್ಕಾರ ಮುಖ್ಯ ಕಾರಣ, ನಂತರ ಸಂಸ್ಕೃತಿ, ಸಾಹಿತ್ಯ ಬರುತ್ತದೆ. ಗುಜರಾತ್ ರಾಜ್ಯದಲ್ಲಿ ದೊರಕುವ ಕಲ್ಲುಗಳನ್ನು ತೆಗೆದು ಅದಕ್ಕೆ ಸಂಸ್ಕಾರ ನೀಡಿ ಅವುಗಳನ್ನು ವಜ್ರಗಳನ್ನಾಗಿ ಮಾರ್ಪಡಿಸುತ್ತಾರೆ. ಅದಕ್ಕೆ ತುಂಬಾ ಬೆಲೆ ಸಿಗುತ್ತದೆ ಎಂದರು.

ಒಂದು ಕಲ್ಲಿಗೆ ಸಂಸ್ಕಾರ ಸಿಕ್ಕರೆ ಅದು ಸಂಸ್ಕೃತಿಯ ಭಾಗವಾಗಿ ಮಾರ್ಪಾಡಾಯಿತು. ಬಿದಿರಿಗೆ ಸಂಸ್ಕಾರ ನೀಡಿದರೆ ಅದು ಕೊಳಲಾಗಿ ಬದಲಾವಣೆಯಾಗುತ್ತದೆ ಎಂದು ಉದಾಹರಿಸಿದರು. ಸಂಸ್ಕೃತಿ ಆಂತರಿಕವಾದುದು. ಅದು ಕಣ್ಣಿಗೆ ಗೋಚರಿಸುವುದಿಲ್ಲ. ಸಂಸ್ಕಾರ ಮನುಷ್ಯನ ನಡವಳಿಕೆಯನ್ನು ಬಿಂಬಿಸುತ್ತದೆ ಎಂದರು.

ಸಂಸ್ಕಾರದಿಂದ ಸಂಸ್ಕೃತಿ, ಸಂಸ್ಕೃತಿಯಿಂದ ಸಾಹಿತ್ಯ ಬೆಳೆದಿದೆ. ಸಾಹಿತ್ಯ ಜನಜೀವನದ ಅಂದಿನ ಕಾಲಘಟ್ಟವನ್ನು ಜನರಿಗೆ ತಿಳಿಸುತ್ತದೆ. ಪಂಪ, ರನ್ನ, ಕುಮಾರವ್ಯಾಸನ ಕಾರ್ಯಗಳನ್ನು ವಿವರಿಸಿದರು.

ಹಾಸನದ ಶಾಸನವೊಂದರಲ್ಲಿ ಕರ್ನಾಟಕದ ಜನ, ಜೀವನ ಹೇಗಿತ್ತೆಂದು ತಿಳಿದು ಬರುತ್ತದೆ. ಅಂದಿನ ಜನ ಕಲ್ಲಿನಲ್ಲಿ ಕೆತ್ತಿ ಜನಜೀವನವನ್ನು ವಿವರಿಸುತ್ತಿದ್ದರು. ಅವೇ ಶಾಸನಗಳು. ಅವರು ರಚಿಸಿದ ಕಾವ್ಯಗಳಿಂದ ಅಂದಿನ ಜೀವನ ಶೈಲಿ ಮತ್ತು ನಾಡಿನ ಬಗ್ಗೆ ತಿಳಿಯುತ್ತದೆ. ಇದರಿಂದ ನಮ್ಮ ಜೀವನದ ಮೇಲೆ ಸಾಹಿತ್ಯದ ಪ್ರಭಾವ ಗೊತ್ತಾಗುತ್ತದೆ ಎಂದರು. ಸೃಜನಶೀಲ ಸಾಹಿತ್ಯ ಕತೆ, ಕಾದಂಬರಿ, ಲೇಖನ, ನೀಳ್ಗತೆ, ಕವಿತೆ ಒಳಗೊಂಡಿರುತ್ತದೆ ಎಂದರು.

ಬಸವಣ್ಣನವರ ವಚನಗಳಲ್ಲಿ ಸಂಸ್ಕಾರ, ಸಂಸ್ಕೃತಿ ಹಾಗೂ ಸಾಹಿತ್ಯವಿತ್ತು. ಡಿವಿಜಿ ಮತ್ತು ಕುವೆಂಪು, ಬೇಂದ್ರೆಯವರ ಸಾಹಿತ್ಯದಲ್ಲಿನ ಕೆಲವು ವಿಷಯಗಳನ್ನು ಹಂಚಿಕೊಂಡರು. ಮನುಷ್ಯನಲ್ಲಿ ಸಹಜ ಗುಣ ಇರಬೇಕು. ಸಮಾಜದಲ್ಲಿ ನೊಂದವರಿಗೆ, ದುರ್ಬಲರಿಗೆ ಸಹಾಯ ಮಾಡುವುದು ಕರ್ತವ್ಯವನ್ನಾಗಿ ಮಾಡಿಕೊಳ್ಳಬೇಕು. ಮನುಷ್ಯನಿಗೆ ಸಂಸ್ಕಾರ ಸಿಕ್ಕರೆ ಒಳ್ಳೆಯ ಮಾನವನಾಗಲು ಸಾಧ್ಯ ಎಂದರು.

ಸಂಸ್ಕಾರ ಮತ್ತು ಸಂಸ್ಕೃತಿ ಮತ್ತು ಸಾಹಿತ್ಯದಿಂದ ಅರಿತ ಮಾನವ ಎತ್ತರಕ್ಕೆ ಏರಬಲ್ಲ ಹಾಗೂ ಜೀವನದಲ್ಲಿ ಏನಾದರೂ ಸಾಧನೆ ಮಾಡಬಲ್ಲ. ಎಲ್ಲರೂ ಹೃದಯವಂತರಾಗಿ ವಿಶಾಲ ಮನೋಭಾವನೆ ಬೆಳೆಸಿಕೊಳ್ಳಿ, ಎಲ್ಲರನ್ನೂ ಪ್ರೀತಿಸಿ ಆರೋಗ್ಯವಂತ, ಸದೃಢ ಸಮಾಜ ಕಟ್ಟಲು ಸಹಕರಿಸಿ ಎಂದು ಕೋರಿದರು.

ಸಾಹಿತಿ ಹೆಚ್.ಕೆ.ಕೊಟ್ರಪ್ಪ ಮಾತನಾಡಿದರು. ಸೌಮ್ಯ ಪ್ರಾರ್ಥಿಸಿದರು. ಸುಬ್ರಹ್ಮಣ್ಯ ನಾಡಿಗೇರ್ ಸ್ವಾಗತಿಸಿದರು. ನಾಗರತ್ನ ವಂದಿಸಿದರು. ಶ್ಯಾಮಲಾ, ಮಂಜಮ್ಮ, ರಾಧಾ ಹನುಮಂತಪ್ಪ, ಚಂದನಾ ಕವಿತೆಗಳನ್ನು ವಾಚಿಸಿದರು.

# ಸುಡಾನ್ ಸೈನಿಕ ವಿಮಾನ ಪತನಗೊಂಡು 46 ಸಾವು

ಕೈರೋ, ಫೆ. 26 - ಸುಡಾನ್ ಸೈನಿಕ ವಿಮಾನ ಒಂಡುರ್ಮನ್ ನಗರದಲ್ಲಿ ಪತನಗೊಂಡು 46 ಜನ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ವಿಮಾನ ಮನೆಯೊಂದರ ಮೇಲೆ ಪತನಗೊಂಡಿದೆ.

# ನಗರದ ವಿವಿಧ ದೇವಾಲಯಗಳಲ್ಲಿ ಸಂಭ್ರಮದ ಮಹಾಶಿವರಾತ್ರಿ ಆಚರಣೆ


ಶ್ರೀ ಲಿಂಗೇಶ್ವರ ದೇವಸ್ಥಾನ


ಶಿವ ಪಾರ್ವತಿ ದೇವಸ್ಥಾನ


ಪಶುಪತಿ ದೇವಸ್ಥಾನ


ಶಂಭುಲಿಂಗೇಶ್ವರ ದೇವಸ್ಥಾನ


ಆನೆಕೊಂಡ ಈಶ್ವರ ದೇವಸ್ಥಾನ


ಶಿವಧ್ಯಾನ ಮಂದಿರ


ಅಥಣಿ ಕಾಲೇಜು ಆವರಣ


ಕಾಶಿ ವಿಶ್ವನಾಥ ದೇವಸ್ಥಾನ


ಲಿಂಗೇಶ್ವರ ದೇವಸ್ಥಾನ


ಪಾತಾಳಲಿಂಗೇಶ್ವರ ದೇವಸ್ಥಾನ

## ಆಹಾರ ತ್ಯಾಜ್ಯ ಬೆರಕೆಯಿಂದ ಕಾಂಕ್ರೀಟ್‌ಗೆ ಹೆಚ್ಚಿನ ಬಲ : ಐಐಟಿ ಇಂದೋರ್ ಸಂಶೋಧನೆ

ಇಂದೋರ್, ಫೆ. 26 - ಆಹಾರ ತ್ಯಾಜ್ಯವನ್ನು ಕಾಂಕ್ರೀಟ್‌ನಲ್ಲಿ ಬೆರೆಸುವುದರಿಂದ ನಿರ್ಮಾಣಕ್ಕೆ ಹೆಚ್ಚಿನ ಬಲ ಸಿಗಲಿದೆ ಎಂದು ಇಂದೋರ್ ಐಐಟಿ ಸಂಶೋಧಕರು ತಿಳಿಸಿದ್ದಾರೆ.

ಆಹಾರ ತ್ಯಾಜ್ಯ ಕೊಳೆತಾಗ ಅದರಿಂದ ಕಾರ್ಬನ್ ಡೈಆಕ್ಸೈಡ್ ಬಿಡುಗಡೆಯಾಗುತ್ತದೆ. ಆಹಾರ ತ್ಯಾಜ್ಯ ಹಾಗೂ ನಾನ್ ಪ್ಯಾಥೋಜನಿಕ್ ಬ್ಯಾಕ್ಟೀರಿಯಾ ಮಿಶ್ರಣ ಮಾಡಿ ಕಾಂಕ್ರೀಟ್‌ನಲ್ಲಿ ಬೆರೆಸಲಾಗುತ್ತದೆ. ಆಗ ಕಾರ್ಬನ್ ಡೈಯಾಕ್ಸೈಡ್ ಹಾಗೂ ಕಾಂಕ್ರೀಟ್‌ನಲ್ಲಿರುವ ಕ್ಯಾಲ್ಸಿಯಂ ಅಯಾನುಗಳು ಬೆರೆತು ಕ್ಯಾಲ್ಸಿಯಂ ಕಾರ್ಬೋನೇಟ್ ಹರಳುಗಳು ಸೃಷ್ಟಿಯಾಗುತ್ತವೆ ಎಂದು ಸಂಶೋಧನಾ ತಂಡದ ನೇತೃತ್ವ ವಹಿಸಿದ್ದ ಉಪನ್ಯಾಸಕ ಸಂದೀಪ್ ಚೌಧರಿ ತಿಳಿಸಿದ್ದಾರೆ.

ಕಾಂಕ್ರೀಟ್‌ನಲ್ಲಿ ಇರುವ ರಂಧ್ರ ಹಾಗೂ ಬಿರುಕುಗಳನ್ನು ಈ ಹರಳುಗಳು ಮುಚ್ಚುತ್ತವೆ. ಇದರಿಂದಾಗಿ ಕಾಂಕ್ರೀಟ್ ತೂಕದ ಮೇಲೆ ಹೆಚ್ಚು ಪರಿಣಾಮವಾಗದೆ ನಿರ್ಮಾಣದ ಗಟ್ಟಿತನ ಹೆಚ್ಚಾಗುತ್ತದೆ ಎಂದು ಸಿವಿಲ್ ಇಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕ ಚೌಧರಿ ಹೇಳಿದ್ದಾರೆ. ಈ ರೀತಿ ನಾನ್ ಪ್ಯಾಥೋಜನಿಕ್ ಬ್ಯಾಕ್ಟೀರಿಯಾ, ಆಹಾರ ತ್ಯಾಜ್ಯ ಹಾಗೂ ಕಾಂಕ್ರೀಟ್ ಬೆರೆಸುವುದರಿಂದ ಕಾಂಕ್ರೀಟ್ ಗಟ್ಟಿತನ ಎರಡು ಪಟ್ಟು ಹೆಚ್ಚಾಗುತ್ತದೆ ಎಂದವರು ಹೇಳಿದ್ದಾರೆ.

ಅಲ್ಲದೆ ರಂಧ್ರಗಳು ಹಾಗೂ ಬಿರುಕುಗಳು ಮುಚ್ಚಿದ ತಕ್ಷಣವೇ ಈ ಬ್ಯಾಕ್ಟೀರಿಯಾ ಬೆಳೆಯುವುದು ನಿಲ್ಲಿಸುತ್ತವೆ. ಹೀಗಾಗಿ ನಂತರದಲ್ಲಿ ಕಟ್ಟಡಗಳಿಗೆ ಯಾವುದೇ ಹಾನಿಯಾಗುವುದಿಲ್ಲ ಎಂದವರು ಹೇಳಿದ್ದಾರೆ.

ಕಾಂಕ್ರೀಟ್‌ನಲ್ಲಿ ಬ್ಯಾಕ್ಟೀರಿಯ ಹಾಗೂ ಸಿಂಥೆಟಿಕ್ ರಾಸಾಯನಿಕಗಳನ್ನು ಬೆರೆಸಲು ಇರುವ ಹಳೆಯ ಪದ್ಧತಿಗಳು ಅತ್ಯಂತ ದುಬಾರಿಯಾಗಿವೆ. ಆಹಾರ ತ್ಯಾಜ್ಯ ಬೆರೆಸುವುದು ಕಡಿಮೆ ವೆಚ್ಚದ್ದಾಗಿದೆ ಎಂದು ಬಯೋಸೈನ್ಸ್ ಮತ್ತು ಬಯೋಮೆಡಿಕಲ್ ಇಂಜಿನಿಯರಿಂಗ್ ವಿಭಾಗದ ಉಪನ್ಯಾಸಕ ಹೇಮಚಂದ್ರ ಝಾ ತಿಳಿಸಿದ್ದಾರೆ.

## 'ದಾವಣಗೆರೆ ಹಳೆ ಊರಿನ ಶಿವರಾತ್ರಿ ಸ್ವಾರಸ್ಯಗಳು'

# ಚನ್ನಬಸಪ್ಪನವರ ಆಸಿಡ್ ಬಾಲ್ಸ್ ?!!

ದಾವಣಗೆರೆ ಹಳೆ ಊರಿನಲ್ಲಿ ದಶಕಗಳ ಹಿಂದೆ ಮಹಾಶಿವರಾತ್ರಿ ಬಂತೆಂದರೆ ಶ್ರೀ ಪಾತಾಳ ಲಿಂಗೇಶ್ವರ ದೇವಸ್ಥಾನ, ರಾಮಲಿಂಗೇಶ್ವರ ದೇವಸ್ಥಾನ, ದುರ್ಗಾಂಬಿಕಾ ದೇವಸ್ಥಾನದ ಕಲ್ಲೇಶ್ವರ ಹಾಗೂ ತ್ರಿಭುವನೇಶ್ವರ, ಕನ್ನಿಕಾ ಪರಮೇಶ್ವರಿ ದೇವಸ್ಥಾನದ ಶ್ರೀ ನಗರೇಶ್ವರ, ಮಾರ್ಕಂಡೇಶ್ವರ ದೇವಸ್ಥಾನ, ವೀರಭದ್ರೇಶ್ವರ ದೇವಸ್ಥಾನ, ಲಿಂಗದ ಕಲ್ಲುಗುಡಿಯ ಲಿಂಗೇಶ್ವರ, ಚೌಕಿಪೇಟೆಯ ಶ್ರೀ ಬಕ್ಕೇಶ್ವರ ಮುಂತಾದ ದೇವಸ್ಥಾನಗಳಲ್ಲಿ ಭಕ್ತರ ಶ್ರದ್ಧಾಭಕ್ತಿಯ ಸಮರ್ಪಣೆ ಕಣ್ಣು ತುಂಬುವುದು ಅಷ್ಟೇ ಅಲ್ಲ ಹೃದಯ ತುಂಬುವಂತೆ ಇರುತ್ತಿತ್ತು.

ರಾತ್ರಿ ಜಾಗರಣೆ ವೇಳೆಯಲ್ಲಿ ದೇವಸ್ಥಾನಗಳಲ್ಲಿ ಭಜನೆಗಳು ಸಂಗೀತ, ಕೀರ್ತನಾದಿಗಳು ನೆರವೇರುತ್ತಿದ್ದರೆ, ಊರಿನ ಬೀದಿಗಳಲ್ಲಿ ಪಡ್ಡೆ ಹುಡುಗರ ತುಂಟಾಟವೂ ಅಷ್ಟೇ ಅಬ್ಬರದಿಂದ ನಡೆಯುತ್ತಿತ್ತು.

ಸುಮಾರು 60 ವರ್ಷಗಳ ಕೆಳಗೆ ಶ್ರೀ ಬಕ್ಕೇಶ್ವರ ದೇವಸ್ಥಾನದಲ್ಲಿ ಶಿವರಾತ್ರಿ ಜಾಗರಣೆ ನಿಮಿತ್ತ ಎಂದಿನಂತೆ ಭಜನೆ ನಡೆಯುವುದಿತ್ತು. ಸಾಮಾನ್ಯವಾಗಿ ಆಗ ಭಜನೆಯಲ್ಲಿ ಸುಶ್ರಾವ್ಯವಾಗಿ ದೇವತಾ ನಾಮ ಸಂಕೀರ್ತನೆಗಳನ್ನು ಹಾಡುತ್ತಿದ್ದುದು ಸುಪ್ರಸಿದ್ಧ ಗಾಯಕರು, ಹಾರ್ಮೋನಿಯಂ ವಾದಕರು ಆಗಿದ್ದ ಕೀರ್ತಿ ಶೇಷ ಚಾರ್ಮನಿ ಚನ್ನಬಸಪ್ಪನವರು. ಇವರಿಗೆ ಚೌಕಿಪೇಟೆಯ ವಾಲಿ ಮನೆತನದವರು ಒಬ್ಬರು ತಬಲಾ ನುಡಿಸುತ್ತಿದ್ದರು. ವಿಶೇಷ ಸಂದರ್ಭಗಳಲ್ಲಿ ಮಹಾರಾಜಪೇಟೆಯಲ್ಲಿ ಚರ್ಮ ವಾದ್ಯಗಳ ತಯಾರಿಕೆ ಹಾಗೂ ದುರಸ್ತಿ ಮಾಡುತ್ತಿದ್ದ ತಬಲಾ ರಾಮಣ್ಣ ತಬಲಾ ಹಾಗೂ ಮೃದಂಗ ನುಡಿಸುತ್ತಿದ್ದುದು ಇತ್ತು. ಹಾಗೆಯೇ ಒಮ್ಮೊಮ್ಮೆ ಕೆನರಾ ಬ್ಯಾಂಕಿನ ಉದ್ಯೋಗಿಗಳಾಗಿದ್ದ ಕೀರ್ತಿಶೇಷ ಲೆಕ್ಕದಯ್ಯನವರೂ ಹಾರ್ಮೋನಿಯಂ ನುಡಿಸಲು ಬರುತ್ತಿದ್ದರು. ಚೌಕಿಪೇಟೆಯಲ್ಲಿಯೇ ಕಲಾ ಪ್ರಿಂಟಿಂಗ್ ಪ್ರೆಸ್ ನಡೆಸುತ್ತಿದ್ದ ಐರಣಿ ಚೆನ್ನಬಸಪ್ಪನವರು ಒಮ್ಮೊಮ್ಮೆ ತಂಬೂರಿ ಸಹಕಾರ ನೀಡಲು ಬರುತ್ತಿದ್ದುದು ಉಂಟು. ಕೀರ್ತಿಶೇಷ ರಂಗ ಅಭಿನೇತ್ರಿ ಪದ್ಮಶ್ರೀ ಚಿಂದೋಡಿ ಲೀಲಾರ ಅಣ್ಣನವರಾದ ಕೀರ್ತಿ ಶೇಷ ಶಾಂತಪ್ಪನವರು ಸಹ ಒಮ್ಮೊಮ್ಮೆ ಭಜನೆಗೆ ಬಂದು ಹಾರ್ಮೋನಿಯಂ ನುಡಿಸುತ್ತಾ ಹಾಡಿದ್ದು ಉಂಟು. ಚೌಕಿಪೇಟೆಯಲ್ಲಿಯೇ ಗಿರವಿ ಲೇವಾದೇವಿ ಅಂಗಡಿ ನಡೆಸುತ್ತಿದ್ದ ರಾಜಸ್ಥಾನ ಮೂಲದ ಸಂಘವಿ ಗೇನ್ಮಲ್ ಬಿಕ್ಕಾಜಿರವರು ಸಹ ಒಮ್ಮೊಮ್ಮೆ ಬಂದು ಭಜನೆಯಲ್ಲಿ ತಮ್ಮ ಪಿಟೀಲು ವಾದ್ಯ ಸಹಕಾರ ಸಹ ಕೊಟ್ಟಿದ್ದಾರೆ. ಧಾರವಾಡ ಕುಂದುಗೋಳ ಹಾಗೂ ಮಹಾರಾಷ್ಟ್ರದ ಕಡೆಯಿಂದ ದಾವಣಗೆರೆಗೆ ಬರುತ್ತಿದ್ದ ಗಾಯಕರು ಬುವಾಗಳು ಸಹಾ ಅಪರೂಪಕ್ಕೆ ಶ್ರೀ ಬಕ್ಕೇಶ್ವರ ದೇವಸ್ಥಾನಕ್ಕೂ ಬಂದು ಸೋಮವಾರ ಅಥವಾ ಅಮಾವಾಸ್ಯೆಯ ಭಜನೆಯಲ್ಲಿ ಹಾಡಿದ್ದೂ ಉಂಟು.

ಈಗ್ಗೆ ಸುಮಾರು 60 ವರ್ಷಗಳ ಕೆಳಗೆ ಒಂದು ಶಿವರಾತ್ರಿಯಂದು ರಾತ್ರಿ ಭಜನೆಯಲ್ಲಿ ಚಾರ್ಮನಿ ಚನ್ನಬಸಪ್ಪನವರು ಹಾಡುವುದನ್ನು ಕೇಳಬೇಕೆಂದು ಆಗ ಜನಪ್ರಿಯ ಸಂಗೀತ ಶಿಕ್ಷಕರು ಹಾಗೂ ಕಲೋಪಾಸಕರು ಆಗಿದ್ದ ಮುನಿ ವೆಂಕಟಪ್ಪನವರು ಬಂದಿದ್ದರು, ಅದರಲ್ಲೂ ಚಾರ್ಮನಿ ಚನ್ನಬಸಪ್ಪನವರ ಕಂಠದಲ್ಲಿ 'ಶಿವಶಂಕರಿ ಶಿವಾನಂದಲಹರಿ..' ಹಾಡನ್ನು ಕೇಳಲು ಎಲ್ಲರೂ ಇಷ್ಟಪಡುತ್ತಿದ್ದರು. ಭಜನೆಗೆ ಪರಿಕರಗಳೆಲ್ಲವೂ ಸಿದ್ಧವಾಗಿದ್ದವು. ಚನ್ನಬಸಪ್ಪನವರು ಹಾರ್ಮೋನಿಯಂ ಇಟ್ಟುಕೊಂಡು ತಯಾರಾಗಿದ್ದರು. ಆದರೆ ಹಾಡು ಪ್ರಾರಂಭಿಸುತ್ತಿಲ್ಲ?!. 'ಶುರು ಮಾಡ್ರಪ್ಪ' ಎಂದು ದಾವಳಗಿ ಕೊಟ್ರಪ್ಪನವರು ಹೇಳಿದರು. ಆದರೂ ಚನ್ನಬಸಪ್ಪನವರು ಏಕೋ ಬಾಯಿ ಬಿಡುತ್ತಿಲ್ಲ?!. ಏಕೆಂದು ಕೇಳಿದಾಗ 'ಆಸಿಡ್ ಬಾಲ್ಸ್ ತರಾಕೆ ಹೋಗ್ಯಾರೆ ಬರ್ಲಿ' ಎಂದರು. 'ಏನಿದು ಆಸಿಡ್ ಬಾಲ್ಸ್?' ಎಂದು ನಾನು ನನ್ನ ಅಣ್ಣ ಎಚ್. ಆನಂದರಾಮ ಶಾಸ್ತ್ರಿಯವರನ್ನು ಕೇಳಿದೆ. ಅವರು ನಗುತ್ತಾ ಹೇಳಿದರು 'ಮತ್ತೇನೂ ಅಲ್ಲ, ಸಿಟ್ರಿಕ್ ಆಸಿಡ್ ಅಂದರೆ ಹುಳಿ ಹಾಗೂ ಸಕ್ಕರೆಯಿಂದ ಮಾಡಿದ ಪೆಪ್ಪರ್ ಮಿಂಟ್ ಅದು, ಹುಳಿ ಸಿಹಿ ಮಿಶ್ರವಾಗಿರುತ್ತದೆ, ಗೋಲಿಯಂತೆ ಗುಂಡಗೆ ಬೆಳ್ಳಗೆ ಇರುತ್ತದಲ್ಲ ಅದೇ' ಎಂದರು. 'ಓಹೋ ನಾವು ನಿಂಬೆ ಹುಳಿ ಪೆಪ್ಪರ್ಮೆಂಟ್ ಅಂತೇವಲ್ಲ ಅದೇ ತಾನೇ' ಎಂದೆ, 'ಹೌದು' ಎಂದರು. ಆಸಿಡ್ ಬಾಲ್ಸ್ ತರಲು ಹೋದವನು ಬರಿಗೈಯ್ಯಲ್ಲಿ ಬಂದ. ಚೌಕಿಪೇಟೆ, ಮಹಾರಾಜಪೇಟೆ ಮೂಲೆಯಲ್ಲಿ ಇಟಗಿ ಮನೆತನದವರು ಒಬ್ಬರು ನಡೆಸುತ್ತಿದ್ದ ಬೀಡಾ ಅಂಗಡಿಯಲ್ಲಿ ಈ ಆಸಿಡ್ ಬಾಲ್ಸ್ ಬಾಟಲಿಗಳಲ್ಲಿ ಇರುತ್ತಿತ್ತು. ಆದರೆ ಅವತ್ತು ಶಿವರಾತ್ರಿ ನಿಮಿತ್ತವೋ ಏನೋ ಅವರ ಅಂಗಡಿ ಸಂಜೆ ಬಾಗಿಲು ಹಾಕಿತ್ತು. ಆಸಿಡ್ ಬಾಲ್ಸ್ ಇಲ್ಲದೆ ಚಾರ್ಮನಿ ಚನ್ನಬಸಪ್ಪನವರ ಕಂಠದಿಂದ ಸಂಗೀತ ಹೊರಡದು. ಏನು ಮಾಡುವುದೆಂದು ಯೋಚಿಸುತ್ತಿದ್ದಾಗ ಬಹುಷಃ ಐನಳ್ಳಿ ವಿಶ್ವನಾಥ್ ಇರಬೇಕು ಸೈಕಲ್ ತೆಗೆದುಕೊಂಡು ಸುಭಾಷ್ ರಸ್ತೆ ಅಂದರೆ ಅಶೋಕ ಟಾಕೀಸ್ ಬಳಿ ಹೋಗಿ ಒಂದು ಅಂಗಡಿಯಿಂದ ಆಸಿಡ್ ಬಾಲ್ಸ್ ತೆಗೆದುಕೊಂಡು ಬಂದು ಚನ್ನಬಸಪ್ಪನವರಿಗೆ ಕೊಟ್ಟರು. ಆಸಿಡ್ ಬಾಲ್ಸ್ ಚಾರ್ಮನಿ ಚನ್ನಬಸಪ್ಪನವರ ಬಾಯಿಗೆ ಹೋಗುತ್ತಲೇ ಅವರ ಕಂಠಸಿರಿಯಿಂದ ಸಂಗೀತ ಹೊರಬರಲಾರಂಭಿಸಿತು. ಮುಂದುವರೆಯುತ್ತಾ ಅಷ್ಟೇ ಅಮೋಘವಾಗಿ 'ಶಿವಶಂಕರಿ ಶಿವಾನಂದಲಹರಿ ಚಂದ್ರಕಳಾಧರಿ ಈಶ್ವರಿ...' ಹಾಡು ಅದ್ಭುತವಾಗಿ ಹೊರಹೊಮ್ಮಿತು. ಮುನಿ ವೆಂಕಟಪ್ಪ ನವರಾದಿಯಾಗಿ ಎಲ್ಲರೂ ತಲೆದೂಗಿದರು.

ಹಾಡು ಮುಗಿಯುತ್ತಲೇ 'ಶ್ರೀ ಬಕ್ಕೇಶ್ವರ ಮಹಾರಾಜ ಕೀ ಜೈ' ಎಂದು ಕುಳಿತವರು ಹೇಳಿದರೆ ಒಬ್ಬ ಹುಡುಗ ಮಾತ್ರ 'ಆಸಿಡ್ ಬಾಲ್ಸ್ ಕೀ ಜೈ' ಎಂದ. ಕೇಳಿಸಿಕೊಂಡವರು ಗೊಳ್ಳೆಂದು ನಕ್ಕರು.

**- ಎಚ್. ಬಿ. ಮಂಜುನಾಥ್,**
ಹಿರಿಯ ಪತ್ರಕರ್ತರು, ದಾವಣಗೆರೆ.

# ಮಹಾಶಿವರಾತ್ರಿಯಂದು ಶಿವನಿಗೆ ವಿಶ್ರಾಂತಿಯ ಕಾಲ

ದಾವಣಗೆರೆ, ಫೆ.26- ಮಹಾಶಿವರಾತ್ರಿಯನ್ನು ಭಾರತದಾದ್ಯಂತ ಆಚರಿಸುವ ವಿಶೇಷವಾದ ವ್ರತದ ಆಚರಣೆಯಾಗಿದೆ. ಮಹಾಶಿವರಾತ್ರಿ ಎಂದರೆ ಶಿವನ ವಿಶ್ರಾಂತಿಯ ಕಾಲವಾಗಿದೆ. ಮಾಘ ಮಾಸ ಕೃಷ್ಣ ಪಕ್ಷ ಚತುರ್ದಶಿಯಂದು ದೇವಲೋಕದಲ್ಲಿ ಶಿವನು ರಾತ್ರಿಯ ಒಂದು ಪ್ರಹರ ವಿಶ್ರಾಂತಿಯನ್ನು ಪಡೆಯುವಾಗ ಅದು ಪೃಥ್ವಿಯ ಮೇಲೆ ವರ್ಷಕ್ಕೊಂದು ಸಲ ಮಹಾಶಿವರಾತ್ರಿ ಎಂದು ಆಚರಿಸಲಾಗುತ್ತದೆ ಎಂದು ಯೋಗ ತಜ್ಞ ರಾಘವೇಂದ್ರ ಗುರೂಜಿ ಅಭಿಪ್ರಾಯಪಟ್ಟರು.

ನಗರದ ಆದರ್ಶಯೋಗ ಪ್ರತಿಷ್ಠಾನದ ಶ್ರೀ ಮಹಮ್ಮಾಯಿ ವಿಶ್ವಯೋಗ ಮಂದಿರ ಹಾಗೂ ಯೋಗ ಚಿಕಿತ್ಸಾ ಕೇಂದ್ರದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಇಂದು ಹಮ್ಮಿಕೊಳ್ಳಲಾಗಿದ್ದ 'ಸರಳ ಶಿವಧ್ಯಾನ ಯೋಗ' ಎಂಬ ಕಾರ್ಯಕ್ರಮದಲ್ಲಿ ಶಿವರಾತ್ರಿಯ ಮಹತ್ವ ಕುರಿತು ಅವರು ಮಾತನಾಡಿದರು.

ಮಹಾಶಿವರಾತ್ರಿಯಂದು ಶಿವನು ಭೂಲೋಕಕ್ಕೆ ಬಂದು ಭಕ್ತರ ಇಷ್ಟಾರ್ಥಗಳನ್ನು ಅನುಗ್ರಹಿಸುವನು ಎಂಬ ನಂಬಿಕೆ ಇದೆ, ಆದ್ದರಿಂದ ಶಿವ ತತ್ವವು ಎಂದಿಗಿಂತ ಸಾವಿರಪಟ್ಟು ಹೆಚ್ಚು ಕಾರ್ಯನಿರತವಾಗಿರುತ್ತದೆ. ಈ ದಿನ ಮಾಡುವ ಉಪಾಸನೆಯಿಂದ ಹೆಚ್ಚಿನ ಪ್ರಮಾಣದಲ್ಲಿ ಶಿವತತ್ವದ ಲಾಭವು ಸಿಗಲಿದೆ. ದಿನವಿಡೀ 'ಓಂ ನಮಃ ಶಿವಾಯ' ಎಂಬ ಶಿವ ಪಂಚಾಕ್ಷರಿ ಮಂತ್ರವನ್ನು ಜಪಿಸುವುದರಿಂದ ಮೋಕ್ಷವನ್ನು ಸಾಧಿಸಬಹುದು.




**ಯೋಗತಜ್ಞ ರಾಘವೇಂದ್ರ ಗುರೂಜಿ**

ವಿಶೇಷ 'ಸರಳ ಶಿವಧ್ಯಾನ ಯೋಗ' ಶಿವ ಮಾನಸ ಪೂಜೆಯ ಮಹಾಯೋಗಿ ಶಿವಧ್ಯಾನವನ್ನು ಭಾಗವಹಿಸಿದ್ದ ಯೋಗ ಸಾಧಕರಿಗೆ ಮಾಡಿಸಿದರು. ಭಾಗವಹಿಸಿದ್ದ ಪ್ರತಿಯೊಬ್ಬರೂ ಧನ್ಯತಾ ಭಾವದಿಂದ ಶಿವಭಜನೆ ಮತ್ತು ಧ್ಯಾನದಲ್ಲಿ ಮಗ್ನರಾಗಿ ಮಹಾಯೋಗಿ ಶಿವನಿಗೆ ಅಷ್ಟಾಂಗ ನಮಸ್ಕಾರ ಸಲ್ಲಿಸಿದರು.

ಶಿವಭಜನೆಯ ನಂತರ ಕೊನೆಯಲ್ಲಿ ನಗರದ ಶ್ರೀ ಪಾತಾಳ ಲಿಂಗೇಶ್ವರ ದೇವಸ್ಥಾನದಲ್ಲಿ ಅಭಿಷೇಕಗೊಂಡ ಪವಿತ್ರ ತೀರ್ಥವನ್ನು ವಿತರಿಸಲಾಯಿತು.

ಶಿವಧ್ಯಾನದಲ್ಲಿ ಪತ್ರಕರ್ತ ಹೆಚ್.ಎನ್. ಪ್ರಕಾಶ್, ಅರುಣೋದಯ ಬಟ್ಟೆ ಅಂಗಡಿ ಮಾಲೀಕರಾದ ಅಜಯ್ ಮತ್ತು ಆದಿತ್ಯ ಸೋಲಂಕಿ ಸಹೋದರರು, ಜಿಲ್ಲಾ ಕಛೇರಿಯ ಉದ್ಯೋಗಿ ಸಂತೋಷ್ ಹೆಚ್., ಅಜ್ಜಂಪುರದ ಪಿ.ಡಿ.ಓ. ಹರ್ಷ ಕೆ.ಎಸ್., ಸಾಫ್ಟವೇರ್ ಉದ್ಯೋಗಿ ಭರತ್ ವಾದೋನಿ, ಶ್ರೀಮತಿ ಕಾವ್ಯ, ವಿಜಯಲಕ್ಷ್ಮಿ ಇನ್ನಿತರರು ಭಾಗವಹಿಸಿದ್ದರು.

## ಹೊನ್ನಾಳಿಯಲ್ಲಿ ದ್ವಾದಶ ಜ್ಯೋತಿರ್ಲಿಂಗಗಳ ದರ್ಶನ



ಹೊನ್ನಾಳಿ, ಫೆ.26- ಶಿವರಾತ್ರಿ ಅಂಗವಾಗಿ ಹಿರೇಕಲ್ಮಠದ ತೂಗುಯ್ಯಾಲೆ ಎದುರು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಿಂದ ಅಧ್ಯಾತ್ಮಿಕ ಚಿತ್ರ ಪ್ರದರ್ಶನ, ದ್ವಾದಶ ಜ್ಯೋತಿರ್ಲಿಂಗಗಳ ದರ್ಶನದ ಮೂಲಕ ಪರಮಾತ್ಮನ ಅವತರಣಿಕೆಯ ವಿಚಾರಗಳನ್ನು ಪರಿಚಯಿಸಲಾಯಿತು ಎಂದು ಈಶ್ವರೀಯ ವಿದ್ಯಾಲಯದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಕುಮಾರಿ ಜ್ಯೋತಿ ತಿಳಿಸಿದ್ದಾರೆ.

ಪಟ್ಟಣದ ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ನಿನ್ನೆ ಸಂಜೆ 89ನೇ ಶಿವರಾತ್ರಿ ಅಂಗವಾಗಿ ಶಿವ ಧ್ವಜಾರೋಹಣವನ್ನು ಜ್ಯೋತಿ ಅವರು ನೆರವೇರಿಸಿದರು.

ಈ ಸಂದರ್ಭದಲ್ಲಿ ಆರುಂಡಿ ರುದ್ರೇಶ್, ಬಿದರ ಗಡ್ಡೆ ಬಸವರಾಜಪ್ಪ, ಹೊನ್ನಾಳಿ ಚಂದ್ರಶೇಖರ್, ಅನ್ನಪೂರ್ಣಮ್ಮ, ಶಾರದಮ್ಮ ಮಠದ ರುದ್ರಮ್ಮ ಇನ್ನಿತರರಿದ್ದರು.

## ಶಿಬಾರದಲ್ಲಿ ಇಂದಿನಿಂದ ಮಾ. 14ರವರೆಗೆ ಭಾರೀ ದನಗಳ ಜಾತ್ರೆ

ಚಿತ್ರದುರ್ಗ ಸಮೀಪದ ಶಿಬಾರದಲ್ಲಿ ಶ್ರೀ ಮುರುಘರಾಜೇಂದ್ರ ಬೃಹನ್ಮಠದ ವತಿಯಿಂದ ಪ್ರತಿವರ್ಷ ನಡೆಸಿಕೊಂಡು ಬರುತ್ತಿರುವ ಶ್ರೀ ಜಗದ್ಗುರು ಗುರುಪಾದ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಹಾಗು ಶ್ರೀ ಮೈಲಾರಲಿಂಗೇಶ್ವರ ಸ್ವಾಮಿಯ 70ನೇ ವರ್ಷದ ರಥೋತ್ಸವ ಹಾಗೂ ಭಾರೀ ದನಗಳ ಜಾತ್ರೆಯನ್ನು ಇಂದಿನಿಂದ ಬರುವ ಮಾರ್ಚ್ 14ರವರೆಗೆ ಆಯೋಜಿಸಲಾಗಿದೆ.

ರಾಜ್ಯದ ವಿವಿಧ ಭಾಗಗಳಿಂದ ಹಾಗು ತಮಿಳುನಾಡು, ಆಂಧ್ರಪ್ರದೇಶದಿಂದ ಹಳ್ಳಿಕಾರ್, ಅಮೃತಮಹಲ್, ಸಣ್ಣಮಲ್ಲಿಗೆ, ಗುಜುಮಾವು, ನಾಟಿ ಸೇರಿದಂತೆ ವಿವಿಧ ತಳಿಯ ರಾಸುಗಳು ಸೇರಲಿವೆ. ಈ ಜಾತ್ರೆಗೆ ಸರ್ಕಾರದಿಂದ ಅನುಮತಿಯಿದ್ದು, ಸುತ್ತಮುತ್ತಲ ಜಿಲ್ಲೆಗಳ ರೈತರು ತಮ್ಮ ರಾಸುಗಳೊಂದಿಗೆ ಪಾಲ್ಗೊಂಡು, ಸದುಪಯೋಗ ಪಡೆಯಬೇಕೆಂದು ಶ್ರೀಮಠದ ತಿಳಿಸಲಾಗಿದೆ.

ಜಾತ್ರೆಯ ಸ್ಥಳದಲ್ಲಿ ನೀರು, ಬೆಳಕು ಮತ್ತು ಪಶುವೈದ್ಯಕೀಯ ಸೌಲಭ್ಯವಿರುತ್ತದೆ. ಜಾತ್ರೆಯಲ್ಲಿ ಹೋಟೆಲ್‌ಗಳು, ತಿಂಡಿ ತಿನಿಸುಗಳ ಅಂಗಡಿಗಳು, ಹೂ ಮಾರುವವರು ಇತ್ಯಾದಿಯವರಿಗೆ ಜಾಗ ನಿಗದಿಪಡಿಸಲಾಗಿದೆ. ಇಚ್ಚೆಯುಳ್ಳವರು ಜಾತ್ರಾ ಸಮಿತಿಯಲ್ಲಿ ಹೆಸರು ನೋಂದಾಯಿಸಬಹುದಾಗಿದೆ. ಜಾತ್ರೆ ನಡೆಯುವ ಸ್ಥಳದಲ್ಲಿ ಮದ್ಯ, ಮಾಂಸ ಮಾರಾಟ ಮತ್ತು ಸೇವನೆ ನಿಷೇಧಿಸಲಾಗಿದೆ.

ವಿವರಕ್ಕೆ ಶ್ರೀ ಮುರುಘಾ ಮಠ (9880312595, 9880577376, 9980724365, 8310467509) ವನ್ನು ಸಂಪರ್ಕಿಸಬಹುದು.

## ಇಸ್ರೇಲ್ ಸೈನ್ಯಕ್ಕೆ ಎಐ, ಕ್ಲೌಡ್ ಸೇವೆಗಳ ಮಾರಾಟದ ವಿರುದ್ಧ ಮೈಕ್ರೋಸಾಫ್ಟ್ ಉದ್ಯೋಗಿಗಳ ಪ್ರತಿಭಟನೆ

ವಾಷಿಂಗ್ಟನ್, ಫೆ. 26 - ಮೈಕ್ರೋಸಾಫ್ಟ್ ಮುಖ್ಯ ಕಾರ್ಯಕಾರಿ ಅಧಿಕಾರಿ ಕರೆದಿದ್ದ ಸಭೆಯಲ್ಲಿ ಕಂಪನಿಯ ಐವರು ಉದ್ಯೋಗಿಗಳು ಇಸ್ರೇಲ್ ಸೈನ್ಯಕ್ಕೆ ಕೃತಕ ಬುದ್ಧಿವಂತಿಕೆ ಹಾಗೂ ಕಂಪ್ಯೂಟರ್ ಸೇವೆಗಳನ್ನು ಮಾರುವುದರ ವಿರುದ್ಧ ಪ್ರತಿಭಟಿಸಿದ್ದಾರೆ.

ಗಾಜಾ ಹಾಗೂ ಲೆಬನಾನ್‌ನಲ್ಲಿ ಉಗ್ರರ ವಿರುದ್ಧ ಯುದ್ಧ ನಡೆಸುವಾಗ ಇಸ್ರೇಲ್ ಸೈನ್ಯ ಮೈಕ್ರೋಸಾಫ್ಟ್ ಹಾಗೂ ಓಪನ್ ಎಐ ಸಂಸ್ಥೆಗಳ ಕೃತಕ ಬುದ್ಧಿವಂತಿಕೆ ಮಾದರಿಗಳನ್ನು ಬಳಸಿತ್ತು.

ಮೈಕ್ರೋಸಾಫ್ಟ್ ಸಿಇಒ ಸತ್ಯ ನಡೆಲ್ಲಾ ಅವರು ಸಭೆಯೊಂದರಲ್ಲಿ ಕಂಪನಿಯ ಹೊಸ ಉತ್ಪನ್ನಗಳ ಬಗ್ಗೆ ತಿಳಿಸುತ್ತಿದ್ದರು. ಆಗ ಐವರು ಉದ್ಯೋಗಿಗಳು ಇಸ್ರೇಲ್ ಸೈನ್ಯಕ್ಕೆ ಕೃತಕ ಬುದ್ಧಿವಂತಿಕೆ ಹಾಗೂ ಕ್ಲೌಡ್ ಸೇವೆಗಳನ್ನು ಒದಗಿಸುವುದನ್ನು ವಿರೋಧಿಸಿದರು.

ಈ ಸಭೆಯ ಚಿತ್ರ ಹಾಗೂ ವಿಡಿಯೋಗಳನ್ನು ನೇರವಾಗಿ ಪ್ರಸಾರ ಮಾಡಲಾಗುತ್ತಿತ್ತು. ಉದ್ಯೋಗಿಗಳು ಪ್ರತಿಭಟಿಸುತ್ತಿದ್ದರೂ ಸಹ ನಡೆಲ್ಲಾ ಆ ಬಗ್ಗೆ ಲೆಕ್ಕಿಸದೆ ತಮ್ಮ ಮಾತುಗಳನ್ನು ಮುಂದುವರಿಸಿದ್ದರು. ಇಬ್ಬರೂ ವ್ಯಕ್ತಿಗಳು ಪ್ರತಿಭಟನೆ ನಡೆಸುತ್ತಿದ್ದವರನ್ನು ಕೋಣೆಯಿಂದ ಹೊರಗೆ ಕರೆದುಕೊಂಡು ಹೋದರು.

ಎಲ್ಲಾ ನಿಲುವುಗಳನ್ನು ತಿಳಿಸಲು ನಾವು ಹಲವಾರು ವೇದಿಕೆಗಳನ್ನು ಒದಗಿಸುತ್ತೇವೆ ಎಂದು ಮೈಕ್ರೋಸಾಫ್ಟ್ ಹೇಳಿಕೆಯಲ್ಲಿ ತಿಳಿಸಲಾಗಿದೆ.

ನಮ್ಮ ಉದ್ಯಮಕ್ಕೆ ಅಡ್ಡಿಯಾಗದ ರೀತಿಯಲ್ಲಿ ಉದ್ಯೋಗಿಗಳು ನಿಲುವು ತಿಳಿಸಬೇಕು. ಒಂದು ವೇಳೆ ಅಡ್ಡಿಯಾದರೆ ಅವರು ಸ್ಥಳದಿಂದ ತೆರಳಲು ಸೂಚಿಸುತ್ತೇವೆ. ಉನ್ನತ ಗುಣಮಟ್ಟದ ಔದ್ಯಮಿಕ ಪದ್ಧತಿಯನ್ನು ಎತ್ತಿ ಹಿಡಿಯಲು ನಾವು ಬದ್ಧರಾಗಿದ್ದೇವೆ ಎಂದು ಮೈಕ್ರೋಸಾಫ್ಟ್ ತಿಳಿಸಿದೆ. ಪ್ರತಿಭಟನೆ ನಡೆಸಿದ ಉದ್ಯೋಗಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದೇ? ಎಂಬ ಪ್ರಶ್ನೆಗೆ ಮೈಕ್ರೋಸಾಫ್ಟ್ ಯಾವುದೇ ಉತ್ತರ ನೀಡಿಲ್ಲ. ಪ್ಯಾಲೆಸ್ತೇನ್ ನಿರಾಶ್ರಿತರಿಗೆ ಸಂಬಂಧಿಸಿದಂತೆ ಮೈಕ್ರೋಸಾಫ್ಟ್ ಕೇಂದ್ರ ಕಚೇರಿಯಲ್ಲಿ ಕಳೆದ ಅಕ್ಟೋಬರ್ ತಿಂಗಳಲ್ಲಿ ಪ್ರತಿಭಟನೆ ನಡೆಸಿದ ಇಬ್ಬರು ಉದ್ಯೋಗಿಗಳನ್ನು ಕಂಪನಿಯಿಂದ ಹೊರಹಾಕಲಾಗಿತ್ತು.

ಮೈಕ್ರೋಸಾಫ್ಟ್ ತನ್ನ ಕಂಪ್ಯೂಟಿಂಗ್ ಸೇವೆಯನ್ನು ಇಸ್ರೇಲ್ ಸೈನ್ಯಕ್ಕೆ ಒದಗಿಸುತ್ತಿರುವುದನ್ನು ಉದ್ಯೋಗಿಗಳ ಒಂದು ಗುಂಪು ವಿರೋಧಿಸುತ್ತಿದೆ. ಕೆಲವು ಉದ್ಯೋಗಿಗಳು ಇಸ್ರೇಲ್ ಪರವಾಗಿ ಬೆಂಬಲ ವ್ಯಕ್ತಪಡಿಸಿದ್ದಾರೆ.

## ನಗರದಲ್ಲಿ ಇಂದು ಪದ್ಮಸಾಲಿ ಸಮಾಜದ ಬೆಳ್ಳಿ ರಥೋತ್ಸವ

ಶ್ರೀ ಮಾರ್ಕಂಡೇಶ್ವರ ಪದ್ಮಶಾಲಿ ಸಮಾಜದ ವತಿಯಿಂದ ಮಹಾಶಿವರಾತ್ರಿ ಪ್ರಯುಕ್ತ ಇಂದು ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಮಾರ್ಕಂಡೇಶ್ವರ ಪದ್ಮಶಾಲಿ ಸಮಾಜ ಸೇವಾ ಸಂಘದ ಅಧ್ಯಕ್ಷ ಎಸ್.ಟಿ.ಪಿ. ತಿಪ್ಪೇಶ್, ಪ್ರಧಾನ ಕಾರ್ಯದರ್ಶಿ ವಿ. ಎಸ್.ಪರಶುರಾಮ್ ತಿಳಿಸಿದ್ದಾರೆ.

ಇಂದು ಬೆಳಿಗ್ಗೆ 9.30 ಕ್ಕೆ ಶ್ರೀ ಸ್ವಾಮಿಯ ಬೆಳ್ಳಿ ರಥೋತ್ಸವ ಜರುಗಲಿದ್ದು, ತುಮ್ಮಿನಕಟ್ಟೆಯ ಶ್ರೀ ಪ್ರಭುಲಿಂಗ ಸ್ವಾಮೀಜಿ ಪೂಜೆ ನೆರವೇರಿಸಲಿದ್ದಾರೆ. ಎಸ್‌ಕೆಪಿ ರಸ್ತೆಯಿಂದ ಪ್ರಾರಂಭವಾಗುವ ರಥೋತ್ಸವ ದೊಡ್ಡಪೇಟೆ, ಬಿ.ಎಸ್. ಚನ್ನಬಸಪ್ಪ ಬಟ್ಟೆ ಅಂಗಡಿ ರಸ್ತೆ, ಹಾಸಬಾವಿ ಸರ್ಕಲ್, ಗಡಿಯಾರ ಕಂಬದ ರಸ್ತೆ, ಕಾಯಿಪೇಟೆ, ಹೊಂಡದ ಸರ್ಕಲ್ ಮೂಲಕ ದೇವವಸ್ಥಾನ ತಲುಪಲಿದೆ. ನಂತರ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

## ಆದರ್ಶ ವಿದ್ಯಾಲಯ 6ನೇ ತರಗತಿ ಪ್ರವೇಶಕ್ಕೆ ಅರ್ಜಿ

ಹರಪನಹಳ್ಳಿ, ಫೆ.26- ತಾಲ್ಲೂಕಿನ ಅನಂತನಹಳ್ಳಿ ಸಮೀಪದ ಸರ್ಕಾರಿ ಆದರ್ಶ ವಿದ್ಯಾಲಯದ 2025-26ನೇ ಸಾಲಿನ 6ನೇ ತರಗತಿ ದಾಖಲಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ 5ನೇ ತರಗತಿ ವ್ಯಾಸಂಗ ಮಾಡುತ್ತಿರುವ ತಾಲ್ಲೂಕಿನ ನಿವಾಸಿಗಳು www.schooleducation.kar.nic.in ಅಥವಾ www.vidyavahini.karnataka.gov.in ಇಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಅರ್ಜಿ ಸಲ್ಲಿಕೆ ಪ್ರಾರಂಭವಾಗಿದ್ದು, ಇದೇ ದಿನಾಂಕ 28 ಕೊನೆಯ ದಿನವಾಗಿದೆ. ಮಾರ್ಚ್ 23ರಂದು ಪರೀಕ್ಷೆ ನಡೆಯಲಿವೆ. ವಿವರಕ್ಕೆ ಸಂಪರ್ಕಿಸಿ : 9880955078, 7975534725, 9845977050.

# ಪೋಕ್ಸೋ ಸಂತ್ರಸ್ಥೆಗೆ ನ್ಯಾಯ, ಸೂಕ್ತ ನೆರವು ದೊರಕಬೇಕು



## ನ್ಯಾಯಾಧೀಶರಾದ ರಾಜೇಶ್ವರಿ ಎನ್.ಹೆಗಡೆ ಅಭಿಮತ

ದಾವಣಗೆರೆ, ಫೆ.26- ಪೋಕ್ಸೋ ಕಾಯ್ದೆಯಲ್ಲಿ ದಾಖಲಾಗುವ ಪ್ರಕರಣಗಳಲ್ಲಿ ಸಂತ್ರಸ್ತರಿಗೆ ತ್ವರಿತ ನ್ಯಾಯದ ಜೊತೆಗೆ ಸೂಕ್ತ ನೆರವು ಹಾಗೂ ಸೌಲಭ್ಯಗಳು ದೊರಕುವಂತಾಗಬೇಕು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ ಹೇಳಿದರು.

ಸ್ಥಳೀಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯದ ಸಭಾಂಗಣದಲ್ಲಿ ನಿನ್ನೆ ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ಪೋಕ್ಸೋ ಸಭೆ ಹಾಗೂ ವಿಶೇಷ ಕಾರ್ಯಪಡೆ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಕ್ಕಳಿಗೆ ರಕ್ಷಣಾ ಕಾಯ್ದೆಗಳು ಸೇರಿದಂತೆ ಮೂಲಭೂತ ಹಕ್ಕು ಮತ್ತು ಕರ್ತವ್ಯಗಳ ಅರಿವು ಮೂಡಿಸಲು ನುರಿತ ವಕೀಲರ ತಂಡಗಳನ್ನು ರಚಿಸಿ, ಶಾಲೆಗಳಲ್ಲಿ ಕಾನೂನು ಅರಿವು ಕಾರ್ಯಕ್ರಮಗಳನ್ನು ನಡೆಸಬೇಕು. ಆವರಗೆರೆ ಎಸ್‌ಪಿಎಸ್ ನಗರದಲ್ಲಿರುವ ಶಾಲೆಯಲ್ಲಿ ಲೈಬ್ರರಿ ಸ್ಥಾಪಿಸಬೇಕು. ಸಾಮಾಜಿಕವಾಗಿ ಹಿಂದುಳಿದ ವರ್ಗದವರಿಗೆ ಸರ್ಕಾರದ ಸೌಲಭ್ಯಗಳು ಸಿಗುವಂತಾಗಬೇಕು. ಪೋಕ್ಸೋ ಕಾಯ್ದೆಯಡಿ ದಾಖಲಾಗುವ ಸಂತ್ರಸ್ತರಿಗೆ ತುರ್ತು ಮತ್ತು ಮಧ್ಯಂತರ ಪರಿಹಾರ ಸೇರಿದಂತೆ ಎಲ್ಲಾ ಸೌಲಭ್ಯಗಳು ಗರಿಷ್ಠ ಪ್ರಮಾಣದಲ್ಲಿ ದೊರಕಬೇಕು. ಅವರಿಗಿರುವ ಕಾನೂನಿನ ಅವಕಾಶಗಳ ಮಾಹಿತಿ ದೊರಕಿಸಲು ಇಲಾಖೆ ಮುಂದಾಗಬೇಕು ಎಂದರು.

ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ.ಕರೆಣ್ಣವರ ಮಾತನಾಡಿ, ಶಾಲೆ, ಹಾಸ್ಟೆಲ್‌ಗಳಲ್ಲಿ ಗ್ರಂಥಾಲಯ ಇಲ್ಲದೇ ಇರುವುದು ತುಂಬಾ ಬೇಸರದ ಸಂಗತಿ. ಹಾಸ್ಟೆಲ್‌ಗಳಲ್ಲಿ ಮಕ್ಕಳಿಗೆ ಹಾಸಿಗೆ ವ್ಯವಸ್ಥೆ, ಊಟ, ವಸತಿಯ ವ್ಯವಸ್ಥೆ, ಓದಲು ಬರೆಯಲು ಟೇಬಲ್ ನೀಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಆಸ್ಪತ್ರೆಯ ಕಟ್ಟಡ ತುಂಬಾ ಹಳೆಯದಾಗಿದೆ. ಕೂಡಲೇ ಕಟ್ಟಡ ನವೀಕರಣಕ್ಕೆ ಕ್ರಮ ಕೈಗೊಳ್ಳಬೇಕು. ಬಾಣಂತಿ, ಗರ್ಭಿಣಿಯವರಿಗೆ ಗುಣಮಟ್ಟದ ಔಷಧಿ ನೀಡಬೇಕು. ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು ಹೆಚ್ಚು ಜಾಗೃತಿಯಿಂದ ಕೆಲಸ ನಿರ್ವಹಿಸಬೇಕು. ಉಪಯುಕ್ತವಾದ ಸಮಯದಲ್ಲಿ ಆಶಾ ಕಾರ್ಯಕರ್ತೆಯರು ಸ್ಥಳದಲ್ಲಿ ಇರಬೇಕು. ಸಿಡಿಪಿಓ ತಮ್ಮ ವ್ಯಾಪ್ತಿಯ ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಬೇಕು ಎಂದು ಸೂಚಿಸಿದರು.

ಪೋಕ್ಸೋ ಕಾಯ್ದೆ ಕುರಿತು ಎಲ್ಲಾ ಶಾಲಾ - ಕಾಲೇಜುಗಳಲ್ಲಿ ಜಾಗೃತಿ ನೀಡಬೇಕು. ಬಾಲ್ಯ ವಿವಾಹ ನಿಷೇಧ, ಪೋಕ್ಸೋ ಕಾಯ್ದೆ, ಮಾನವ ಕಳ್ಳಸಾಗಣೆ ತಡೆ, ಬಾಲನ್ಯಾಯ ಮಂಡಳಿ ಸೇರಿದಂತೆ ಸಹಾಯಕ್ಕಾಗಿ ಇರುವ ಮತ್ತು ತುರ್ತು ಸಂಪರ್ಕಕ್ಕಾಗಿ ಇರುವ ಸಹಾಯವಾಣಿಗಳ ಕುರಿ ತಂತೆ ಶಾಲಾ - ಕಾಲೇಜುಗಳ ಸೂಚನಾ ಫಲಕ ಗಳಲ್ಲಿ ವಿದ್ಯಾರ್ಥಿಗಳಿಗೆ ಕಾಣುವಂತೆ ಪ್ರದರ್ಶಿಸಬೇಕು. ಇಂತಹ ಕಾನೂನುಗಳ ವಿಷಯವಾಗಿ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಬೇಕೆಂದು ಸೂಚನೆ ನೀಡಿದರು.

ಭಾಷಾ ನಗರ, ಆಜಾದ್ ನಗರ, ಗಾಂಧಿನಗರಗಳಲ್ಲಿ ತುಂಬಾ ಕಳ್ಳತನ ಪ್ರಕರಣಗಳು ಕಂಡು ಬಂದಿರುತ್ತವೆ. ಕೂಡಲೇ ಇದರ ಬಗ್ಗೆ ಕಾಳಜಿ ವಹಿಸಿ ಎಂದು ಪೊಲೀಸ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಮಾರ್ಚ್ 8 ರಂದು ರಾಷ್ಟ್ರೀಯ ಲೋಕ ಅದಾಲತ್ ನಡೆಯಲಿದ್ದು, ಅಷ್ಟರೊಳಗಾಗಿ ಎಲ್ಲಾ ರಾಜೀಯಾಗಬಲ್ಲ ಪ್ರಕರಣಗಳನ್ನು ಪಟ್ಟಿ ಮಾಡಿ, ಇತ್ಯರ್ಥಕ್ಕೆ ಕ್ರಮ ವಹಿಸಬೇಕು. ಸಾರ್ವಜನಿಕರು ಸಹ ಈ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳುವಂತೆ ಇಲಾಖೆಗಳು ಗಮನ ಹರಿಸಲು ತಿಳಿಸಿದರು.

ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಮಂಜುನಾಥ್, ಜಿ.ಪಂ. ಯೋಜನಾ ನಿರ್ದೇಶಕ ಮಲ್ಲಾನಾಯ್ಕ, ವಕೀಲರಾದ ಬಸವರಾಜ್ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು

## ಸಿಗಂಧೂರು ಬ್ರಿಡ್ಜ್ ಶೀಘ್ರ ಲೋಕಾರ್ಪಣೆ



ಚಿತ್ರ : ಜಿಗಳಿ ಪ್ರಕಾಶ್

ಸಿಗಂದೂರು (ತುಮರಿ), ಫೆ.26- ಶರಾವತಿ ಹಿನ್ನೀರಿನಲ್ಲಿ ನಿರ್ಮಾಣವಾಗುತ್ತಿರುವ 2.16 ಕಿ.ಮೀ ಉದ್ದದ 'ಸಿಗಂಧೂರು ಸೇತುವೆ' ರೋಪ್ ವೇ ಕಾಮಗಾರಿ ಬಹುತೇಕ ಪೂರ್ಣಗೊಳ್ಳುವ ಹಂತ ತಲುಪಿದ್ದು, 3-4 ತಿಂಗಳಲ್ಲೇ ಲೋಕಾರ್ಪಣೆಗೊಳ್ಳಲಿದೆ ಎನ್ನಲಾಗುತ್ತಿದೆ.

464 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಗೊಂಡಿರುವ ದೇಶದ 2ನೇ ಅತೀ ಉದ್ದದ ಕೇಬಲ್ ಸೇತುವೆ ರೋಪ್ ವೇ ಇದಾಗಿದ್ದು, ಸೇತುವೆ ಕಾಮಗಾರಿ ಬಹುತೇಕ ಅಂತಿಮ ಹಂತಕ್ಕೆ ತಲುಪಿದೆ. ಕೇಬಲ್ ಜೋಡಣೆ, ಲೈಟಿಂಗ್ ಫಿನಿಷ್, ಸೇತುವೆ ಮೇಲ್ಪದರು ಟಾರ್ ರಸ್ತೆ ಹಾಕುವುದು ಇನ್ನಿತರೆ ಅಂತಿಮ ಹಂತದ ಕಾರ್ಯಗಳು ಮಾತ್ರ ಬಾಕಿ ಉಳಿದಿವೆ.

ಸೇತುವೆಯ ಎರಡೂ ಭಾಗದಲ್ಲಿ 3 ಕಿ.ಮೀ. ರಸ್ತೆ ವಿಸ್ತರಣೆ ಕಾಮಗಾರಿ ಆರಂಭವಾಗಿದ್ದು, ಇದೂ ಸಹ ಶೀಘ್ರ ಪೂರ್ಣಗೊಳ್ಳಲಿದೆ. 2019 ರಲ್ಲಿ ಕೇಂದ್ರ ಸಚಿವ ನಿತಿನ್ ಗಡ್ಕರ್ ಅವರು ಈ ಕಾಮಗಾರಿಗೆ ಚಾಲನೆ ನೀಡಿದ್ದರು. 6 ವರ್ಷಗಳಲ್ಲಿ ಈ ಸೇತುವೆ ನಿರ್ಮಾಣಗೊಂಡಿದ್ದು, ಇದರ ಲೋಕಾರ್ಪಣೆಗೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಕರೆತರುವ ಮಾತುಗಳು ಕೇಳಿಬಂದವು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಮಾಜಿ ಸಚಿವ ಕಾಗೋಡು ತಿಮ್ಮಪ್ಪ, ಸಂಸದ ಬಿ.ವೈ.ರಾಘವೇಂದ್ರ ಮತ್ತು ಶಾಸಕ ಬೇಳೂರು ಗೋಪಾಲಕೃಷ್ಣ ಇವರ ಪ್ರಯತ್ನದ ಫಲವಾಗಿ ಈ ಯೋಜನೆ ಅನುಷ್ಠಾನಗೊಂಡಿದೆ ಎನ್ನಲಾಗಿದೆ.

ಈ ಸೇತುವೆ ನಿರ್ಮಾಣದಿಂದಾಗಿ ಸಿಗಂಧೂರು ಮತ್ತು ಕೊಲ್ಲೂರು, ಮುರುಡೇಶ್ವರ ಮತ್ತಿತರೆ ಪ್ರವಾಸಿ ಸ್ಥಳಗಳಿಗೆ ನೇರ ಸಂಪರ್ಕ ಸಿಕ್ಕಿದ್ದು, ಪ್ರವಾಸಿಗರಿಗೆ ಅನುಕೂಲವಾಗಲಿದೆ.

## ನಗರದಲ್ಲಿಂದು ಆಪತ್ ರಕ್ಷಕ ದಿನಾಚರಣೆ

ದಾವಣಗೆರೆ, ಫೆ. 26- ಸಂಜೀವಿನಿ ಜೀವ ರಕ್ಷಕ ಟ್ರಸ್ಟ್ ಮತ್ತು ಭೀಮ್ ಆರ್ಮಿ ಭಾರತ್ ಏಕತಾ ಮಿಷನ್ ವತಿಯಿಂದ ನಾಳೆ ದಿನಾಂಕ 27 ರ ಗುರುವಾರ ಬೆಳಿಗ್ಗೆ 11.30 ಕ್ಕೆ ನಗರದ ರೋಟರಿ ಬಾಲಭವನದಲ್ಲಿ ಸಚಿವ ಸಂತೋಷ್ ಲಾಡ್ ಅವರ ಜನ್ಮ ದಿನವನ್ನು ಆಪತ್ ರಕ್ಷಕ ದಿನವನ್ನಾಗಿ ಆಚರಿಸಲಾಗುವುದು ಎಂದು ಟ್ರಸ್ಟ್ ರಾಜ್ಯಾಧ್ಯಕ್ಷ ಡಿ. ರಂಗಸ್ವಾಮಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಚಿವ ಸಂತೋಷ್ ಲಾಡ್ ಅವರು ಒರಿಸ್ಸಾದ ರೈಲು ದುರಂತ, ಕೇರಳದ ಗುಡ್ಡ ಕುಸಿತ, ಕೇದಾರನಾಥದಲ್ಲಿ ಪ್ರವಾಹ ಸೇರಿದಂತೆ ಅನೇಕ ಅಪಘಾತ ತುರ್ತು ಪರಿಸ್ಥಿತಿಗಳಲ್ಲಿ ಸಾರ್ವಜನಿಕರ ನೆರವಿಗೆ ನಿಂತು ಸಾವಿರಾರು ಜನರನ್ನು ರಕ್ಷಣೆ ಮಾಡಿರುವುದನ್ನು ಗಮನಿಸಿ ಅವರಿಗೆ ವಿಶೇಷವಾಗಿ ಗೌರವ ಸಲ್ಲಿಸುವ ಸಲುವಾಗಿ ಅವರ ಹುಟ್ಟುಹಬ್ಬವನ್ನು 'ಆಪತ್ ರಕ್ಷಕ ದಿನ' ವನ್ನಾಗಿ ಆಚರಿಸಲಾಗುತ್ತಿದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಬಿ.ನಿಂಗಪ್ಪ, ಧನಂಜಯ, ವಿಜಯ್ ಉಪಸ್ಥಿತರಿದ್ದರು.

## ಹಳೇಕುಂದುವಾಡದ ಕರಿಬಸವೇಶ್ವರ ದೇವಸ್ಥಾನದಲ್ಲಿ ಶಿವರಾತ್ರಿ ಕಾರ್ಯಕ್ರಮ



ದಾವಣಗೆರೆ, ಫೆ. 26 - ಹಳೇ ಕುಂದುವಾಡದಲ್ಲಿರುವ ಶ್ರೀ ಸದ್ಗುರು ಕರಿಬಸವೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಸ್ವಾಮೀಜಿ ನೇತೃತ್ವದಲ್ಲಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್ ಅವರು ಶಿವರಾತ್ರಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಬಿಐಇಟಿ ಪ್ರಾಂಶುಪಾಲ ಡಾ. ಹೆಚ್.ಬಿ. ಅರವಿಂದ್, ವಿದ್ಯಾನಗರ ಠಾಣೆ ಇನ್‌ಸ್ಪೆಕ್ಟರ್ ಶ್ರೀಮತಿ ಶಿಲ್ಪಾ ಮತ್ತು ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಜ್ಯೋತಿರ್ಲಿಂಗಗಳೊಂದಿಗೆ ಶಾಂತಿಯಾತ್ರೆ

**(1ನೇ ಪುಟದಿಂದ)** ಡಾ. ಎನ್. ಹೆಚ್. ಕೃಷ್ಣ, ಇಂಜಿನಿಯರ್ ನಾಗೇಂದ್ರಪ್ಪ ಪಿಸೆ, ಲೆಕ್ಕ ಪರಿಶೋಧಕ ಪ್ರಭುದೇವ್, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ.ಮಂಜುನಾಥ, ಸೀತಮ್ಮ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಹಿಂದಿ ಶಿಕ್ಷಕ ರಾಜಣ್ಣ, ನಿವೃತ್ತ ಇಂಜಿನಿಯರ್ ಕಲ್ಲಪ್ಪ, ಉದ್ಯಮಿ ಬಸವನಗೌಡ್ರು, ಇಂಜಿನಿಯರ್ ಮಂಜುನಾಥ್, ಸಮಾಜ ಸೇವಕರಾದ ಶ್ರೀಮತಿ ರತ್ನ ಪೂಜಾರ್, ವರ್ತಕ ಸಂತೋಷ್ ವರ್ಣೇಕರ್, ನಿವೃತ್ತ ಪ್ರಾಂಶುಪಾಲ ಟಿ.ಹೆಚ್. ಗುಡ್ಡಪ್ಪ, ಕೃಷಿಕರಾದ ಮರುಳಸಿದ್ದಪ್ಪ, ಬಾತಿ ರೇವಣಸಿದ್ದಪ್ಪ, ಬಸಾಪುರದ ಉಮಾಪತಿ, ನಂದಿ ಸಿದ್ದಮ್ಮ, ಮೋಟಿವೇಷನಲ್ ಸ್ಪೀಕರ್ ವಿನಾಯಕ ಮತ್ತಿತರರು ರ್‍ಯಾಲಿಯಲ್ಲಿ ಭಾಗವಹಿಸಿದ್ದರು.

ಶಾಂತಿಯಾತ್ರೆಯು ಶ್ರೀ ಡಿ. ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್‌ನಲ್ಲಿರುವ ಬ್ರಹ್ಮಾಕುಮಾರೀಸ್ ಸಂಸ್ಥೆಯ ಶಿವಧ್ಯಾನ ಮಂದಿರವನ್ನು ತಲುಪಿತು. ನಂತರ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ಶಿವ ಧ್ವಜಾರೋಹಣವನ್ನು ನೆರವೇರಿಸಿದ ಬಳಿಕ ಶಿವಧ್ಯಾನ ಕಾರ್ಯಕ್ರಮಗಳು ಜರುಗಿದವು.

**ದ್ವಾದಶ ಜ್ಯೋತಿರ್ಲಿಂಗಗಳ ದರ್ಶನ :** ಶ್ರೀ ಡಿ. ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್‌ನಲ್ಲಿರುವ ಶಿವಧ್ಯಾನ ಮಂದಿರದಲ್ಲಿ ದ್ವಾದಶ ಜ್ಯೋತಿರ್ಲಿಂಗಗಳ ದರ್ಶನ ಕಾರ್ಯಕ್ರಮವನ್ನು ಈಗಾಗಲೇ ಆರಂಭಿಸಲಾಗಿದ್ದು, ನಾಡಿದ್ದು ದಿನಾಂಕ 28 ರವರೆಗೆ ಪ್ರತಿದಿನ ಬೆಳಿಗ್ಗೆ 10 ರಿಂದ ರಾತ್ರಿ 8 ರವರೆಗೆ ಸಾರ್ವಜನಿಕರು ಉಚಿತವಾಗಿ ವೀಕ್ಷಿಸಬಹುದು.

**ರಾಜಯೋಗ ಶಿಬಿರ :** ಶಿವರಾತ್ರಿ ಪ್ರಯುಕ್ತ ನಾಳೆ ದಿನಾಂಕ 27 ರಿಂದ ಮಾರ್ಚ್ 1ರವರೆಗೆ ಮೂರು ದಿನಗಳ ಕಾಲ ರಾಜಯೋಗ ಶಿಬಿರವನ್ನು ಆಯೋಜಿಸ ಲಾಗಿದ್ದು, ಶಿವಧ್ಯಾನ ಮಂದಿರ ಮತ್ತು ಪಿ.ಜೆ. ಬಡಾವಣೆ 8ನೇ ಮುಖ್ಯರಸ್ತೆ - ಬ್ರಹ್ಮಾ ಕುಮಾರೀಸ್ ರಸ್ತೆಯಲ್ಲಿರುವ ಬ್ರಹ್ಮಾಕುಮಾ ರೀಸ್ ಸಂಸ್ಥೆಯಲ್ಲಿ ಪ್ರತಿದಿನ ಬೆಳಿಗ್ಗೆ 7.30 ರಿಂದ 8.30, ಸಂಜೆ 7 ರಿಂದ 8ರವರೆಗೆ ಒಂದು ಗಂಟೆ ಕಾಲ ಶಿಬಿರ ನಡೆಯಲಿದೆ.

## ಓದುಗರ ಪತ್ರ

### ಫ್ಲೆಕ್ಸ್ ರಹಿತ ಕೊಟ್ಟೂರು ಜಾತ್ರೆ

**ಮಾನ್ಯರೇ,**

ಉತ್ತರ ಕರ್ನಾಟಕದ ಪ್ರಮುಖ ಜಾತ್ರೆಗಳಲ್ಲೊಂದಾದ ಶ್ರೀ ಗುರು ಬಸವೇಶ್ವರರ ರಥೋತ್ಸವಕ್ಕೆ ಪಾದಯಾತ್ರೆಯ ಮೂಲಕ ಕೊಟ್ಟೂರು ಪಟ್ಟಣವನ್ನು ಪ್ರವೇಶಿಸುತ್ತಿದ್ದಂತೆ, ಕೊಂಚ ಗಲಿಬಿಲಿಗೊಂಡಿದ್ದಂತೂ ನಿಜ. ಯಾಕೆಂದರೆ, ಅಲ್ಲಿ ಜಾತ್ರೆಗೆ ಬರುವಂತಹ ಭಕ್ತಾದಿಗಳಿಗೆ ಶುಭಾಶಯ ಕೋರುವಂತಹ ಯಾವುದೇ ರೀತಿಯ ಫ್ಲೆಕ್ಸ್ ಗಳು ಕಾಣಲಿಲ್ಲ.!

ಈ ಬೆಳವಣಿಗೆಯಿಂದ ಸಹಜವಾಗಿಯೇ ನನಗೆ ಖುಷಿ ಎನಿಸಿತು. ನಾ ಕಂಡಂತೆ ಪ್ರತಿ ವರ್ಷವೂ, ರಸ್ತೆಯ ಬದಿಗಳಲ್ಲಿ ಶಾಸಕರು, ಸಂಸದರು, ಸಮಾಜ ಸೇವಕರು, ರಾಜಕೀಯ ಮುಖಂಡರು ಮತ್ತು ಪ್ರಚಾರ ಪ್ರಿಯರ ಫ್ಲೆಕ್ಸ್‌ಗಳೇ ಎಲ್ಲೆಡೆ ರಾರಾಜಿಸುತ್ತಿದ್ದವು. ಫ್ಲೆಕ್ಸ್ ಗಳ ಹಾವಳಿಯಿಂದಾಗಿ ಸಹಜವಾಗಿಯೇ ಜಾತ್ರೆಯ ಪ್ರಕೃತಿ-ಸೌಂದರ್ಯದ ಸೊಬಗಿಗೆ ಕಿರಿಕಿರಿ ಎನಿಸುತ್ತಿತ್ತು. ಮಿತಿಮೀರಿದ ಫ್ಲೆಕ್ಸ್‌ಗಳ ಹಾವಳಿಯಿಂದಾಗಿ, ಪರಿಸರಕ್ಕೂ ಧಕ್ಕೆಯಾಗುತ್ತಿತ್ತು. ಆದರೆ ಈ ಬಾರಿಯಿಂದ ಫ್ಲೆಕ್ಸ್ ಗಳ ಹಾವಳಿಗೆ ಕಡಿವಾಣ ಹಾಕಿರುವುದು ನಿಜಕ್ಕೂ ಸಂತೋಷದಾಯಕ ವಿಷಯ.

**- ಮುರುಗೇಶ ಡಿ,** ದಾವಣಗೆರೆ.

# ಅಮೆರಿಕದ ಪೌರತ್ವಕ್ಕಾಗಿ 'ಸುವರ್ಣ ಮಾರ್ಗ'

ವಾಷಿಂಗ್ಟನ್, ಫೆ. 26 - ಐವತ್ತು ಲಕ್ಷ ಡಾಲರ್‌ಗೆ ಅಮೆರಿಕದ ಪೌರತ್ವ ಪಡೆಯಲು 'ಬಂಗಾರದ ವೀಸಾ' ನೀಡಲಾಗುವುದು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಇವರು ಶ್ರೀಮಂತರಾಗಿದ್ದಾರೆ ಹಾಗೂ ಇವರು ಯಶಸ್ವಿಯಾಗಿದ್ದಾರೆ. ಇವರು ಸಾಕಷ್ಟು ಹಣ ವೆಚ್ಚ ಮಾಡುತ್ತಾರೆ ಹಾಗೂ ಸಾಕಷ್ಟು ತೆರಿಗೆ ನೀಡುತ್ತಾರೆ ಮತ್ತು ಜನರಿಗೆ ಉದ್ಯೋಗ ಕಲ್ಪಿಸುತ್ತಾರೆ. ಈ ಯೋಜನೆ ಅತ್ಯಂತ ಯಶಸ್ವಿಯಾಗಲಿದೆ ಎಂದು ಟ್ರಂಪ್ ಹೇಳಿದ್ದಾರೆ.

ಕಳೆದ 35 ವರ್ಷಗಳಿಂದ ಅಮೆರಿಕ ಇ.ಬಿ.-5 ವೀಸಾ ನೀಡುತ್ತಿತ್ತು. ವಿದೇಶಿ ಹೂಡಿಕೆ ಹೆಚ್ಚಿಸಲು ಇಂತಹ ವೀಸಾ ನೀಡಲಾಗುತ್ತಿತ್ತು. ಅಮೆರಿಕದಲ್ಲಿ ದಶಲಕ್ಷ ಡಾಲರ್ ವೆಚ್ಚ ಮಾಡುವ ಹಾಗೂ ಕನಿಷ್ಠ 10 ಜನರಿಗೆ ಉದ್ಯೋಗ ನೀಡುವವರಿಗೆ ಈ ಇ.ಬಿ.-5 ವೀಸಾ ನೀಡಲಾಗುತ್ತಿತ್ತು.

ಹಳೆಯ ಪದ್ಧತಿಯನ್ನು ಎರಡು ವಾರಗಳಲ್ಲಿ ಬದಲಿಸಲಾಗುವುದು. ಅದರ ಜಾಗದಲ್ಲಿ ಟ್ರಂಪ್ ಗೋಲ್ಡ್ ಕಾರ್ಡ್ ವ್ಯವಸ್ಥೆ ಜಾರಿಗೆ ತರಲಾಗುವುದು ಎಂದು ವಾಣಿಜ್ಯ ಕಾರ್ಯದರ್ಶಿ ಹೊವಾರ್ಡ್ ಲುಟ್ನಿಕ್ ತಿಳಿಸಿದ್ದಾರೆ.

ಈ ಗೋಲ್ಡ್ ಕಾರ್ಡ್ ವಾಸ್ತವಿಕವಾಗಿ ಗ್ರೀನ್ ಕಾರ್ಡ್ ಅಥವಾ ಶಾಶ್ವತ ನಿವಾಸಿ ಅನುಮತಿಯಾಗಿ ಕಾರ್ಯನಿರ್ವಹಿಸುತ್ತದೆ. ಈ ವೀಸಾ ಪಡೆಯಲು ಹೂಡಿಕೆ ಮಿತಿಯನ್ನು ಹೆಚ್ಚಿಸಲಾಗುವುದು. ಈ ಹಿಂದೆ ಇದ್ದ ವಂಚನಾತ್ಮಕ ಇ.ಬಿ.-5 ಯೋಜನೆ ರದ್ದುಗೊಳಿಸಲಾಗುವುದು ಎಂದವರು ಹೇಳಿದ್ದಾರೆ.

ಸೆಪ್ಟೆಂಬರ್ 30, 2022ಕ್ಕಿಂತ ಒಂದು ವರ್ಷ ಮುಂಚೆ 8 ಸಾವಿರ ಜನರು ಈ ರೀತಿಯ ಹೂಡಿಕೆ ವೀಸಾ ಪಡೆದಿದ್ದರು. ಈ ರೀತಿ ವೀಸಾ ನೀಡುವುದು ವಂಚನೆಯ ಅಪಾಯಕ್ಕೆ ಕಾರಣವಾಗುತ್ತಿದೆ. ಇವರು ಮಾಡುತ್ತಿರುವ ಹೂಡಿಕೆ ಕಾನೂನಾತ್ಮಕವಾಗಿದೆಯೇ ಎಂಬುದರ ಪರಿಶೀಲನೆಯಲ್ಲಿ ಲೋಪಗಳಿವೆ ಎಂದು ಸರ್ಕಾರಿ ವರದಿಯೊಂದು ತಿಳಿಸಿತ್ತು.

ಹೂಡಿಕೆದಾರರಿಗೆ ವೀಸಾ ನೀಡುವ ಪದ್ಧತಿ ವಿಶ್ವದಾದ್ಯಂತ ಇದೆ. ನೂರಕ್ಕೂ ಹೆಚ್ಚು ದೇಶಗಳು ಬಂಗಾರದ ವೀಸಾಗಳನ್ನು ನೀಡುತ್ತಿವೆ ಎಂದು ಹೆನ್ಲೆ ಅಂಡ್ ಪಾರ್ಟನರ್ಸ್ ಸಲಹಾ ಸಂಸ್ಥೆ ತಿಳಿಸಿದೆ.

ಬಂಗಾರದ ವೀಸಾ ಪಡೆಯಲು ಉದ್ಯೋಗ ಸೃಷ್ಟಿಯ ಅಗತ್ಯವಿದೆಯೇ ಎಂಬ ಬಗ್ಗೆ ಟ್ರಂಪ್ ಯಾವುದೇ ಸ್ಪಷ್ಟನೆ ನೀಡಿಲ್ಲ. ಅಮೆರಿಕದ ವಿತ್ತೀಯ ಕೊರತೆ ನೀಗಿಸಲು 10 ದಶಲಕ್ಷ ಬಂಗಾರದ ಕಾರ್ಡ್ ಮಾರುವ ಬಗ್ಗೆ ಟ್ರಂಪ್ ಪ್ರಸ್ತಾಪಿಸಿದ್ದಾರೆ.

## ಕೋಡಿ ಕ್ಯಾಂಪ್ ಕೊಟ್ಟೂರೇಶ್ವರ ಮಠದಲ್ಲಿ ನಾಳೆ ಮಹಾಶಿವರಾತ್ರಿ ಅಮಾವಾಸ್ಯೆ



ದಾವಣಗೆರೆ, ಫೆ. 26 - ದಾವಣಗೆರೆಯ ಕೊಟ್ಟೂರು ಶ್ರೀ ಗುರುಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ಇವರಿಂದ ಮಾಗಾನಹಳ್ಳಿ ಕೋಡಿ ಕ್ಯಾಂಪ್ ಬಳಿ ಇರುವ ಶ್ರೀ ಕೊಟ್ಟೂರೇಶ್ವರ ಮಹಾಸ್ವಾಮಿ ಪಾದಗಳಿಗೆ ಮಹಾಶಿವರಾತ್ರಿ ಪ್ರಯುಕ್ತ ನಾಡಿದ್ದು ದಿನಾಂಕ 28ರ ಶುಕ್ರವಾರ ಬೆಳಿಗ್ಗೆ 6.30ಕ್ಕೆ ಅಭಿಷೇಕ - ಪೂಜೆ ನಡೆಯಲಿದೆ.

ನಂತರ ಬೆಳಿಗ್ಗೆ 8 ರಿಂದ ಪ್ರಸಾದ ದಾಸೋಹ ಏರ್ಪಡಿಸಲಾಗಿದೆ. ಪಾದಯಾತ್ರೆ ಟ್ರಸ್ಟ್ ಇವರು ಸೇವಾಕರ್ತರಾಗಿದ್ದಾರೆ. ವಿವರಕ್ಕೆ ಕಣಕುಪ್ಪಿ ಮುರುಗೇಶಪ್ಪ (96118 89151), ಟಿ.ಜಿ. ಬಕ್ಕೇಶಪ್ಪ (91089 88898), ಬಿ. ಚಿದಾನಂದಪ್ಪ (98455 28449), ಮಲ್ಲಾಬಾದಿ ಗುರುಬಸವರಾಜ್ (79757 97079) ತಿಳಿಸಿದ್ದಾರೆ.

ದಾಸೋಹ ಮನೆ ಮತ್ತು ಸಭಾಂಗಣ ಕಟ್ಟಡವು ಪ್ರಗತಿ ಹಂತದಲ್ಲಿದೆ. ಭಕ್ತಾದಿಗಳು ದೇಣಿಗೆ ಸಲ್ಲಿಸಬಹುದು.

# ಕದಳಿ ಕಮ್ಮಟದಲ್ಲಿ ಉಪನ್ಯಾಸ, ವಚನ ದಾಸೋಹ



ದಾವಣಗೆರೆ, ಫೆ. 26- ಶರಣ ಸಾಹಿತ್ಯ ಪರಿಷತ್ತಿನ ಕದಳಿ ಮಹಿಳಾ ವೇದಿಕೆಯ 162 ನೇ ಕದಳಿ ಕಮ್ಮಟದಲ್ಲಿ ದತ್ತಿ ಉಪನ್ಯಾಸ, ವಚನ ದಾಸೋಹ ಮತ್ತು ಶರಣ ಕಿನ್ನರಿ ಬೊಮ್ಮಯ್ಯನವರ ಶರಣೋತ್ಸವವನ್ನು ನಗರದ ಬಿ.ಇ.ಎ ಶಿಕ್ಷಣ ಮಹಾವಿದ್ಯಾಲಯದಲ್ಲಿ ನಿನ್ನೆ ಆಚರಿಸಲಾಯಿತು.

ಕದಳಿ ಮಹಿಳಾ ವೇದಿಕೆಯ ತಾಲ್ಲೂಕು ಘಟಕದ ಅಧ್ಯಕ್ಷರಾದ ಶರಣೆ ಮಮತಾ ನಾಗರಾಜ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಬಿ.ಇ.ಎ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ನೀತಾ ಎ.ಜೆ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಮುಖ್ಯ ಅತಿಥಿಗಳಾಗಿ ಹಿರಿಯ ವೈದ್ಯ ಡಾ. ಆಲೂರು ಮಂಜುನಾಥ್ ಉಪಸ್ಥಿತರಿದ್ದ ಕಾರ್ಯಕ್ರಮದಲ್ಲಿ ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಇದೇ ಸಂದರ್ಭದಲ್ಲಿ ಲಿಂ. ಸುನಂದಮ್ಮ ಸಿ. ಆಲೂರು ಲಿಂಗೈಕ್ಯ ಚಂದ್ರಶೇಖರಪ್ಪ ಆಲೂರು ಇವರ ದತ್ತಿ ಕಾರ್ಯಕ್ರಮ ನಡೆಸಲಾಯಿತು.

ದತ್ತಿ ದಾಸೋಹಿಗಳು ಸುಜಾತ ರವೀಂದ್ರ, ಡಾ. ಕೆ. ರವೀಂದ್ರ, ದಾಸೋಹಿಗಳಾದ ಸುಜಾತ ರವೀಂದ್ರ ಉಪಸ್ಥಿತರಿದ್ದರು. ಸುನಂದಮ್ಮ ಸಿ. ಆಲೂರು ಮತ್ತು ಚಂದ್ರಶೇಖರಪ್ಪ ಆಲೂರು ಅವರ ಕುಟುಂಬ ವರ್ಗದ ಎಲ್ಲಾ ಸದಸ್ಯರು ಭಾಗವಹಿಸಿದ್ದರು.

ದಾವಣಗೆರೆ ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ವಿಭಾಗದ ಶರಣ ಡಾಕ್ಟರ್ ಮಹಾಂತೇಶ್ ಪಾಟೀಲ್, 'ವಚನಗಳು-ಶಿಕ್ಷಣದ ಇನ್ನೊಂದು ಪರಿಭಾಷೆ' ಎಂಬ ವಿಷಯದ ಬಗ್ಗೆ ದತ್ತಿ ಅನುಭಾವವನ್ನು ನೀಡಿದರು. ಶೈಕ್ಷಣಿಕವಾಗಿ ವಚನಗಳು ತಮ್ಮನ್ನು ಯಾವ ರೀತಿಯಲ್ಲಿ ಉತ್ಕೃಷ್ಟ ಮಟ್ಟಕ್ಕೆ ಏರಿಸುತ್ತವೆ ಎಂಬುದರ ಬಗ್ಗೆ ತಿಳಿಸಿದರು.

ಕದಳಿ ಮಹಿಳಾ ವೇದಿಕೆಯ ರಾಜ್ಯ ಉಪ ಸಂಚಾಲಕರಾದ ಪ್ರಮೀಳಾ ನಟರಾಜ್ ಮತ್ತು ಜಿಲ್ಲಾ ಘಟಕದ ಅಧ್ಯಕ್ಷರಾದ ಗಾಯತ್ರಿ ವಸ್ತ್ರದ್ ಉಪಸ್ಥಿತರಿದ್ದರು. ನಿರ್ಮಲ ಶಿವಕುಮಾರ್, ವಿಜಯ ಚಂದ್ರಶೇಖರ್ ಹಾಗೂ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ವಸಂತ ಕೆ.ಆರ್. ನಿರೂಪಿಸಿದರು. ನಂದಿನಿ ಗಂಗಾಧರ್ ಸ್ವಾಗತಿಸಿದರು. ಸೌಮ್ಯ ಸತೀಶ್ ಅತಿಥಿಗಳನ್ನು ಪರಿಚಯಿಸಿದರು. ಪೂರ್ಣಿಮಾ ಪ್ರಸನ್ನ ದತ್ತಿ ದಾಸೋಹಿಗಳನ್ನು ಸಭೆಗೆ ಪರಿಚಯಿಸಿ, ವಂದಿಸಿ, ಕಾರ್ಯಕ್ರಮ ನಿರೂಪಿಸಿದರು. ನಂದಿನಿ ಗಂಗಾಧರ ಸ್ವಾಗತಿಸಿದರು. ಸೌಮ್ಯ ಸತೀಶ್ ಮುಖ್ಯ ಅತಿಥಿಗಳನ್ನು ಪರಿಚಯಿಸಿದರು.

## ಕೋರ್ಟ್ ಪ್ರಕರಣಗಳಿಗಾಗಿ ಸರ್ಕಾರದಿಂದ 400 ಕೋಟಿ ರೂ. ವೆಚ್ಚ

ನವದೆಹಲಿ, ಫೆ. 26 - ಕಳೆದ ಹತ್ತು ವರ್ಷಗಳಲ್ಲಿ ನ್ಯಾಯಾಲಯಗಳಲ್ಲಿ ಹೋರಾಟ ನಡೆಸಲು ಕೇಂದ್ರ ಸರ್ಕಾರ 400 ಕೋಟಿ ರೂ.ಗಳಿಗೂ ಹೆಚ್ಚಿನ ವೆಚ್ಚ ಮಾಡಿದೆ ಎಂದು ಅಧಿಕೃತ ಅಂಕಿ-ಅಂಶಗಳು ತಿಳಿಸಿವೆ.

2023 - 24ರ ಸಾಲಿನಲ್ಲಿ ಕೇಂದ್ರ ಸರ್ಕಾರ ಕೋರ್ಟ್ ಕೇಸ್‌ಗಳಿಗಾಗಿ 66 ಕೋಟಿ ರೂಪಾಯಿ ವೆಚ್ಚ ಮಾಡಿದೆ. ಇದು ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿದರೆ 9 ಕೋಟಿ ರೂ. ಹೆಚ್ಚಾಗಿದೆ.

2014 -15ರಿಂದ ಸತತವಾಗಿ ಕೋರ್ಟ್ ವೆಚ್ಚ ಹೆಚ್ಚಾಗುತ್ತಿದೆ. ಕೊರೋನಾ ಮಹಾಮಾರಿ ಅತಿ ಹೆಚ್ಚಾಗಿದ್ದ ಎರಡು ವರ್ಷ ಹೊರತುಪಡಿಸಿದರೆ, ಸರ್ಕಾರ ಪ್ರಕರಣಗಳಿಗೆ ಮಾಡುತ್ತಿರುವ ವೆಚ್ಚ ಕಡಿಮೆಯಾಗಿಲ್ಲ.

2014 - 15ರಲ್ಲಿ ಪ್ರಕರಣಗಳಿಗಾಗಿ ಸರ್ಕಾರ 26.64 ಕೋಟಿ ರೂ. ವೆಚ್ಚ ಮಾಡಿತ್ತು. 2014 -15 ರಿಂದ 2023-24ರ ಹಣಕಾಸು ವರ್ಷಗಳ ನಡುವೆ ವ್ಯಾಜ್ಯಗಳಿಗಾಗಿ ಕೇಂದ್ರ ಸರ್ಕಾರ 409 ಕೋಟಿ ರೂ. ವೆಚ್ಚ ಮಾಡಿದೆ.

## ಇಸ್ಪೀಟ್ ಜೂಜು ಅಡ್ಡೆ ಮೇಲೆ ದಾಳಿ 21 ಜನರ ಬಂಧನ, 1.04 ಲಕ್ಷ ರೂ ವಶ

ದಾವಣಗೆರೆ, ಫೆ.26- ನಗರದ ಕುವೆಂಪು ರಸ್ತೆಯಲ್ಲಿನ ಕಟ್ಟಡವೊಂದರಲ್ಲಿ ಅಕ್ರಮವಾಗಿ ಇಸ್ಪೀಟ್ ಜೂಜು ಆಡುತ್ತಿದ್ದವರ ಮೇಲೆ ಪೊಲೀಸರು ದಾಳಿ ನಡೆಸಿ 1.04 ಲಕ್ಷ ರೂ.ಗಳು ಹಾಗೂ 21 ಜನರನ್ನು ವಶಕ್ಕೆ ಪಡೆದಿದ್ದಾರೆ.

ಬಂಧಿತರಿಂದ ನಗದು ಹಾಗೂ ಇಸ್ಪೀಟ್ ಎಲೆಗಳನ್ನು ವಶಪಡಿಸಿಕೊಂಡಿದ್ದು, ಅಕ್ರಮ ಚಟುವಟಿಕೆ ನಡೆಸಲು ಅವಕಾಶ ಮಾಡಿಕೊಟ್ಟ ಮನೆಯ ಮಾಲೀಕರ ವಿರುದ್ಧ ಕೆಟಿಜೆ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕೆಟಿಜೆ ನಗರ ಠಾಣೆಯ ಪೊಲೀಸ್ ನಿರೀಕ್ಷಕ ಹೆಚ್.ಎಸ್. ಸುನೀಲ್ ಕುಮಾರ್ ಹಾಗೂ ಸಿಬ್ಬಂದಿ ಜೂಜುಕೋರರನ್ನು ಬಂಧಿಸಿದ್ದಾರೆ.

# ಮಾ. 1ರಂದು ಬಿಜೆಪಿ ವೀರಶೈವ-ಲಿಂಗಾಯತ ಮುಖಂಡರ ಸಭೆ

ದಾವಣಗೆರೆ, ಫೆ. 26- ಕರ್ನಾಟಕದಲ್ಲಿ ಬಿಜೆಪಿಯನ್ನು ಸದೃಢವಾಗಿ ಬೆಳೆಸುವ ಹಿನ್ನೆಲೆಯಲ್ಲಿ ಮಾರ್ಚ್ 1 ರಂದು ಬೆಳಿಗ್ಗೆ 11.30 ಕ್ಕೆ ನಗರದ ಸಮೃದ್ಧಿ ಬ್ಯಾಂಕ್ವೆಟ್ ಹಾಲ್‌ನಲ್ಲಿ ಚಿತ್ರದುರ್ಗ, ಹಾವೇರಿ, ದಾವಣಗೆರೆ ಜಿಲ್ಲೆಗಳ ವೀರಶೈವ ಲಿಂಗಾಯತ ಸಮಾಜದ ಪ್ರಮುಖರ ಸಭೆ ನಡೆಸಲಾಗುವುದು ಎಂದು ವೀರಶೈವ ಲಿಂಗಾಯತ ಸಮಾಜದ ಮುಖಂಡ ಲೋಕಿಕೆರೆ ನಾಗರಾಜ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ವೀರಶೈವ ಲಿಂಗಾಯತ ಸಮಾಜದ ಎಲ್ಲಾ ಒಳ ಪಂಗಡಗಳ ಪ್ರಮುಖರ ಸಭೆ ನಡೆಯಲಿದ್ದು, ಸಭೆಯನ್ನು ನಡೆಸುವ ಸ್ಥಳದ ಬಗ್ಗೆ ಮುಖಂಡರೊಂದಿಗೆ ಸಮಾಲೋಚನೆ ನಡೆಸಿ ನಿರ್ಧಾರ ಕೈಗೊಳ್ಳಲಾಗುವುದು. ಸಭೆಗೆ ಮೂರು ಜಿಲ್ಲೆಗಳ ವೀರಶೈವ ಲಿಂಗಾಯತ ಸಮಾಜದ ಮುಖಂಡರು, ಮಾಜಿ ಹಾಗೂ ಹಾಲಿ ಶಾಸಕರು, ಸಂಸದರು ಆಗಮಿಸಲಿದ್ದಾರೆ ಎಂದರು.

ಇಡೀ ರಾಜ್ಯದಲ್ಲಿ ವೀರಶೈವ ಲಿಂಗಾಯತ ಸಮಾಜದ ಜನನಾಯಕ ಎಂದರೆ ಬಿ.ಎಸ್. ಯಡಿಯೂರಪ್ಪ ಮಾತ್ರ. ಯಾವುದೇ ಒಳ ಪಂಗಡಗಳ ಬೇಧವಿಲ್ಲದೆ, ಅವರನ್ನು ಸಾಮೂಹಿಕ ನಾಯಕ ಎಂದು ಒಪ್ಪಿಕೊಂಡಿದ್ದಾರೆ. ಅದೇ ರೀತಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಸಹ ರಾಜ್ಯದ ಜನತೆ ಮಾಸ್ ಲೀಡರ್ ಎಂದು ಒಪ್ಪಿಕೊಂಡು ಅವರ ಬೆಂಬಲಕ್ಕೆ ನಿಂತಿದ್ದಾರೆಂದು ಹೇಳಿದರು. 2021 ರಲ್ಲಿ ಬಿ. ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ ಪಕ್ಷದ ಬಹುತೇಕ ಮುಖಂಡರು, ಕಾರ್ಯಕರ್ತರಿಗೆ ಬೇಸರ ಉಂಟಾಗಿ ಪಕ್ಷದಿಂದ ದೂರ ಸರಿದಿದ್ದಾರೆ. ಕಾರಣ ಈ ಎಲ್ಲಾ ಮುಖಂಡರು, ಕಾರ್ಯಕರ್ತರನ್ನು ಒಗ್ಗೂಡಿಸಿ ಮತ್ತೆ ಬಿಜೆಪಿಗೆ ಬಲ ತುಂಬುವ ನಿಟ್ಟಿನಲ್ಲಿ ಈ ಸಭೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ರಾಜಶೇಖರ ನಾಗಪ್ಪ, ಧನಂಜಯ ಕಡ್ಲೇಬಾಳು, ಚಂದ್ರಶೇಖರ ಪೂಜಾರ್, ರಾಜು ವೀರಣ್ಣ, ಜಯಣ್ಣ, ಬಾತಿ ಶಿವಕುಮಾರ್, ತೋಟಪ್ಪ ಮತ್ತಿತರರು ಉಪಸ್ಥಿತರಿದ್ದರು.






## ಸಾಧು ಲಿಂಗಾಯತ ವಿದ್ಯಾರ್ಥಿಗಳಿಂದ ನೆರವಿಗೆ ಅರ್ಜಿ

ದಾವಣಗೆರೆ, ಫೆ. 26- ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳಲ್ಲಿ ಸರ್ಕಾರಿ ಕೋಟಾದಡಿ ಪ್ರವೇಶದೊಂದಿಗೆ ವೈದ್ಯಕೀಯ ಶಿಕ್ಷಣ ಪಡೆಯುತ್ತಿರುವ ಸಾಧು ಲಿಂಗಾಯತ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ಕಲ್ಪಿಸಲು ಶರಣ ಮಾಗನೂರು ಬಸಪ್ಪ ಪ್ರತಿಷ್ಠಾನದಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಪ್ರತಿಷ್ಠಾನದ ಸದಸ್ಯ ಡಾ.ಹೆಚ್.ವಿ. ವಾಮದೇವಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಶರಣ ಮಾಗನೂರು ಬಸಪ್ಪ ಪ್ರತಿಷ್ಠಾನ ಪ್ರತಿ ವರ್ಷ ಸಹ ಪ್ರಥಮ, ದ್ವಿತೀಯ, ತೃತೀಯ ಮತ್ತು ನಾಲ್ಕನೇ ವರ್ಷದಲ್ಲಿ ವೈದ್ಯಕೀಯ ಪದವಿ ವ್ಯಾಸಂಗ ಮಾಡುತ್ತಿರುವ 34 ವಿದ್ಯಾರ್ಥಿಗಳಿಗೆ ತಲಾ 20 ಸಾವಿರ ರೂ. ಆರ್ಥಿಕ ನೆರವು ನೀಡಲಾಗುವುದು ಎಂದರು.

ಸಾಧು ಲಿಂಗಾಯತ ಸಮಾಜಕ್ಕೆ ಸೇರಿದ ಸರ್ಕಾರಿ ಕೋಟಾದಲ್ಲಿ ವೈದ್ಯಕೀಯ ಶಿಕ್ಷಣ ಪಡೆಯುತ್ತಿರುವ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಮಾತ್ರ ಆರ್ಥಿಕ ನೆರವು ಪಡೆಯಲು ಅರ್ಜಿ ಸಲ್ಲಿಸಬಹುದಾಗಿದೆ. ಪ್ರಥಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವವರು ದಾಖಲೆಗಳನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು.

ವೆಬ್‌ಸೈಟ್‌ನಲ್ಲಿ ಅರ್ಜಿ ಡೌನ್ಲೋಡ್ ಮಾಡಿಕೊಂಡು ಮಾರ್ಚ್ 15 ರೊಳಗಾಗಿ ಅರ್ಜಿ ಸಲ್ಲಿಬೇಕು. ವಿವರಕ್ಕೆ ಸಂಪರ್ಕಿಸುವ ಮೊಬೈಲ್ ಸಂಖ್ಯೆ : 9481182700, 9242443909.

ಪತ್ರಿಕಾಗೋಷ್ಠಿಯಲ್ಲಿ ಪ್ರತಿಷ್ಠಾನದ ಅಧ್ಯಕಷ ಎಂ.ಬಿ. ಸಂಗಮೇಶ್ವರಗೌಡ್ರು, ಸದಸ್ಯರಾದ ಡಾ. ಧನ್ಯ ಕುಮಾರ್, ಎಸ್.ಆರ್. ಶಿರುಗಂಬಿ, ಕುಸುಮಾ, ಲೋಹಿತ್ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಶಿವರಾತ್ರಿ ಕಾರ್ಯಕ್ರಮ

ಜಯನಗರ, ಬೀರೇಶ್ವರ ಬಡಾವಣೆ, ಸರಸ್ವತಿನಗರ, ಚಾಮುಂಡಿ ಲೇಔಟ್‌ನಲ್ಲಿರುವ ಶ್ರೀ ಬನ್ನಿ ಮಹಾಂಕಾಳಿ ದೇವಸ್ಥಾನ ಸೇವಾ ಸಮಿತಿ 12 ನೇ ವರ್ಷದ ಮಹಾ ಶಿವರಾತ್ರಿ ಮಹೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ 11 ಕ್ಕೆ ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ. ಎಸ್.ಎಸ್. ಮಲ್ಲಿಕಾರ್ಜುನ್, ಡಾ.ಪ್ರಭಾ ಮಲ್ಲಿಕಾರ್ಜುನ್, ಪ್ರೊ. ಬಾಗೂರು ಆನಂದಪ್ಪ, ಎಸ್. ವಿವೇಕಾನಂದ್, ಬೀರಲಿಂಗಪ್ಪ, ತಾವರ್ಯಾನಾಯ್ಕ, ಡಾ. ಎಸ್. ರಂಗನಾಥ್, ಯೋಗಿರೆಡ್ಡಿ, ಕೆ.ಎಂ. ವೀರೇಶ್ ಭಾಗವಹಿಸಲಿದ್ದಾರೆ.

## ಶಿವರುದ್ರಮ್ಮ ಕಾಣೆಯಾಗಿದ್ದಾರೆ



ನನ್ನ ತಾಯಿಯವರಾದ
**ಶಿವರುದ್ರಮ್ಮ ಲೇ. ತಿಪ್ಪಣ್ಣ**
ವಯಸ್ಸು 85 ವರ್ಷ, ಇವರು ದಿನಾಂಕ 24.02.2025 ರಂದು ದಾವಣಗೆರೆ ಸರಸ್ವತಿ ಬಡಾವಣೆ ಡೋ.ನಂ. 1736/2, ಡಾಬಾ ಸ್ವಾಪ್ ಕೆನರಾ ಬ್ಯಾಂಕ್ ಹಿಂಭಾಗದ ಮನೆಯಿಂದ ಬೆಳಿಗ್ಗೆ 8.45ಕ್ಕೆ ಹೊರಗಡೆ ಹೋದವರು ವಾಪಾಸ್ಸಾಗಿರುವುದಿಲ್ಲ. ಈ ಸಂಬಂಧ ಕೆಟಿಜೆ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದ್ದು, ಯಾರಿಗಾದರೂ ಸಿಕ್ಕಲ್ಲಿ ಹತ್ತಿರದ ಪೊಲೀಸ್ ಠಾಣೆಗಾಗಲೀ ಅಥವಾ ಮೇಲಿನ ವಿಳಾಸಕ್ಕಾಗಲಿ ಅಥವಾ ಶಿವರುದ್ರಮ್ಮ ಅವರ ಪುತ್ರ ಪ್ರಸನ್ನ **99028 03815** ಇವರ ನಂಬರ್‌ಗಾಗಲೀ ಸಂಪರ್ಕಿಸಲು ಕೋರಿದೆ.



**ಮಹಾಶಿವರಾತ್ರಿಯಂದು ನಾಗಾ ಸಾಧುಗಳ ಮೆರವಣಿಗೆ**

ವಾರಣಾಸಿ : ಮಹಾಶಿವರಾತ್ರಿ ದಿನದಂದು ಮಹಾಕುಂಭಮೇಳ ಪೂರ್ಣಗೊಂಡ ಹಿನ್ನೆಲೆಯಲ್ಲಿ, ಕಾಶಿ ವಿಶ್ವನಾಥ ದೇವಾಲಯದಲ್ಲಿ ಪೂಜೆ ಸಲ್ಲಿಸಲು ಮೆರವಣಿಗೆಯಲ್ಲಿ ತೆರಳುತ್ತಿರುವ ನಾಗಾ ಸಾಧುಗಳು.

## ಇಂದು ಗೋವಿನಕೋವಿ ಶ್ರೀಗಳ ವರ್ಧಂತ್ಯೋತ್ಸವ




ನ್ಯಾಮತಿ ತಾಲ್ಲೂಕಿನ ಗೋವಿನಕೋವಿ ಶ್ರೀ ಹಾಲಸ್ವಾಮಿ ಬೃಹನ್ಮಠದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಇಂದು ಮತ್ತು ನಾಳೆ ಶ್ರೀ ಹಾಲಸ್ವಾಮಿ ಜಾತ್ರಾ ಮಹೋತ್ಸವ ಹಾಗೂ ಶ್ರೀ ಸದ್ಗುರು ಶಿವಯೋಗಿ ವಿಶ್ವಾರಾಧ್ಯ ಮಹಾಲಿಂಗ ಹಾಲಸ್ವಾಮಿಗಳವರ ಪಟ್ಟಾಧಿಕಾರದ ಪ್ರಥಮ ವರ್ಷದ ವರ್ಧಂತ್ಯೋತ್ಸವ ನಡೆಯಲಿದೆ.ಇಂದು ಸಂಜೆ ದುರ್ಗಾ ಹೋಮ, ಮಹಾ ಮಂಗಳಾರತಿ, ಧರ್ಮ ಸಭೆ ನಡೆಯಲಿದೆ. ನಾಳೆ ಶುಕ್ರವಾರ ಬೆಳಗ್ಗೆ ಪಲ್ಲಕ್ಕಿ ಉತ್ಸವ, ತೇಜಿ ಉತ್ಸವ ನಂತರ ರಕ್ತದಾನ ಶಿಬಿರ ನಡೆಯಲಿದೆ.

## ಬಿ.ಕಲಪನಹಳ್ಳಿಯಲ್ಲಿಂದು ಶರಣ ಬಸವೇಶ್ವರ ರಥೋತ್ಸವ



ದಾವಣಗೆರೆ ತಾಲ್ಲೂಕಿನ ಬಿ. ಕಲಪನಹಳ್ಳಿ ಶ್ರೀ ಶರಣ ಬಸವೇಶ್ವರ ಸೇವಾ ಸಂಘದ ಸದಸ್ಯರು ಹಾಗೂ ಭಕ್ತಮಂಡಳಿ ವತಿಯಿಂದ ಮಹಾ ಶಿವರಾತ್ರಿ ಸಪ್ತಾಹದ ಅಂಗವಾಗಿ ಇಂದು ಸಂಜೆ 4.30ಕ್ಕೆ ಶರಣ ಬಸವೇಶ್ವರ ರಥೋತ್ಸವ ಜರುಗಲಿದೆ.

## ಹಳ್ಳಿಹಾಳ್ : ಇಂದು ಶ್ರೀ ಮುರುಡ ಬಸವೇಶ್ವರ ದೇವರಿಗೆ ಬೆಳ್ಳಿ ಸಮರ್ಪಣೆ



ಮಲೇಬೆನ್ನೂರು ಸಮೀಪದ ಹಳ್ಳಿಹಾಳ್ ಗ್ರಾಮದ ಊರಮುಂದಿನ ವಂಶಸ್ಥರಿಂದ ಗ್ರಾಮದ ಶ್ರೀ ಮುರುಡ ಬಸವೇಶ್ವರ ದೇವರಿಗೆ 11.50 ಕೆ.ಜಿ ತೂಕದ ಬೆಳ್ಳಿ ಕವಚವನ್ನು ಮಹಾ ಶಿವರಾತ್ರಿಯ ಅಂಗವಾಗಿ ಇಂದು ಬೆಳಿಗ್ಗೆ 9 ಗಂಟೆಗೆ ಅಭಿಷೇಕದೊಂದಿಗೆ ಸಮರ್ಪಿಸಿ, ದಾಸೋಹ ಹಮ್ಮಿಕೊಳ್ಳಲಾಗಿದೆ ಎಂದು ಹೆಚ್. ಟಿ.ಪರಮೇಶ್ವರಪ್ಪ, ಯು.ಎನ್.ಶಿವನಗೌಡ ತಿಳಿಸಿದ್ದಾರೆ.

## ಹೆಲ್ಮೆಟ್ : ಇಂದು ಸಮಾಲೋಚನೆ ಸಭೆ



ದ್ವಿಚಕ್ರ ವಾಹನ ಚಾಲಕರು ಹೆಲ್ಮೆಟ್ ಹಾಕುವುದು ಕಡ್ಡಾಯ ಮಾಡಿರುವ ಪೊಲೀಸ್ ಇಲಾಖೆಯ ಕ್ರಮದ ಹಿನ್ನೆಲೆಯಲ್ಲಿ ಸಮಾಲೋಚನಾ ಸಭೆಯನ್ನು ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿರುವ ಬ್ಯಾಸ್ಕೆಟ್ ಬಾಲ್ ಮೈದಾನದಲ್ಲಿ ಇಂದು ಸಂಜೆ 5 ಕ್ಕೆ ಕರೆಯಲಾಗಿದೆ ಎಂದು ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ತಿಳಿಸಿದ್ದಾರೆ.

## ನಗರದ ಜಾಲಿನಗರದ ರೇವಣಸಿದ್ದೇಶ್ವರ ದೇವಸ್ಥಾನದಲ್ಲಿ ಇಂದು ಅನ್ನ ಸಂತರ್ಪಣೆ



ಹಳೇಜಾಲಿನಗರ, 1ನೇ ಮೇನ್, 2ನೇ ಕ್ರಾಸ್‌ನಲ್ಲಿರುವ ಶ್ರೀ ಗುರು ರೇವಣಸಿದ್ದೇಶ್ವರ ಮಠದಲ್ಲಿ ಶಿವರಾತ್ರಿ ಪ್ರಯುಕ್ತ ಇಂದು ಮಧ್ಯಾಹ್ನ 12.30 ಗಂಟೆಗೆ ಆನ್ನ ಸಂತರ್ಪಣೆ ಇರುತ್ತದೆ. ಸಕಲ ಭಕ್ತಾದಿಗಳು, ಅನ್ನ ಸಂತರ್ಪಣೆಗೆ ಅಕ್ಕಿ, ಬೆಲ್ಲ, ಗೋಧಿ ನುಚ್ಚು, ಬೇಳೆ, ಇನ್ನಿತರೆ ದವಸ-ಧಾನ್ಯಗಳನ್ನು ನೀಡಬೇಕೆಂದು ಮಠದ ಪುರೋಹಿತ ವಿ.ಜಿ. ಗಿರೀಶ್ ಸ್ವಾಮಿಗಳು (99456 24512) ಕೋರಿದ್ದಾರೆ.

## ನಗರದಲ್ಲಿ ಇಂದು ಲಯನ್ಸ್ ಮಾಜಿ ರಾಜ್ಯಪಾಲರಿಗೆ ಗೌರವಾರ್ಪಣೆ

ದಾವಣಗೆರೆ ಲಯನ್ಸ್ ಕ್ಲಬ್ ವತಿಯಿಂದ ಜಿಲ್ಲಾ ಲಯನ್ಸ್ ಮಾಜಿ ರಾಜ್ಯಪಾಲರಿಗೆ ಗೌರವಾರ್ಪಣೆ ಸಲ್ಲಿಸುವ ಕಾರ್ಯಕ್ರಮವು ಲಯನ್ಸ್ ಭವನದಲ್ಲಿ ಇಂದು ಸಂಜೆ 7.45ಕ್ಕೆ ನಡೆಯಲಿದೆ. ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್.ಜಿ ಉಳುವಯ್ಯ ಅಧ್ಯಕ್ಷತೆ ವಹಿಸುವರು ಎಂದು ಕಾರ್ಯದರ್ಶಿ ಅಜಯ್ ನಾರಾಯಣ್ ತಿಳಿಸಿದ್ದಾರೆ.





ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಶ್ರೀ ಕರಿಬಸವೇಶ್ವರ ಗದ್ದುಗೆಯ ಜಾತ್ರಾ ಮಹೋತ್ಸವ

ಉಕ್ಕಡಗಾತ್ರಿಯ ಶ್ರೀ ಕರಿಬಸವೇಶ್ವರ ಗದ್ದುಗೆಯ ಮಹಾ ಶಿವರಾತ್ರಿಯ ಮಹೋತ್ಸವವು ಪ್ರತಿ ವರ್ಷದಂತೆ ಈ ವರ್ಷವೂ ಶ್ರೀ ಶಾಲಿವಾಹನ ಶಕೆ 1946 ನೇ 'ಕ್ರೋಧೀನಾಮ' ಸಂವತ್ಸರ, ಉತ್ತಾರಯಾಣ, ಮಾಘ-ಪಾಲ್ಗುಣ ಮಾಸ ಶಿವರಾತ್ರಿ ಅಮಾವಾಸ್ಯೆಯಿಂದ ಫಾಲ್ಗುಣ ಶುದ್ಧ ಅಷ್ಟಮಿವರೆಗೆ ಈ ಕೆಳಗೆ ಕಾಣಿಸಿದ ಕಾರ್ಯಕ್ರಮಗಳೊಂದಿಗೆ ವಿಜೃಂಭಣೆಯಿಂದ ಗದ್ದುಗೆಯ ಪೂಜೆ, ಜಾಗರಣೆ ನಡೆಯುವುದು. ಕಾರಣ ಸಕಲ ಭಕ್ತಾದಿಗಳು ಉಕ್ಕಡಗಾತ್ರಿಯ ಅಜ್ಜಯ್ಯನ ಗದ್ದಿಗೆಯ ಮಹಾಶಿವರಾತ್ರಿಯ ರಥೋತ್ಸವಕ್ಕೆ ಆಗಮಿಸಿ ಚೈತನ್ಯ ಸ್ವರೂಪರು, ಸರ್ವ ಸಂಕಷ್ಟಗಳ ನಿವಾರಕರಾದ ಶ್ರೀ ಗುರು ಕರಿಬಸವೇಶ್ವರ ಗದ್ದುಗೆಯ ಕೃಪಾಶೀರ್ವಾದ ಪಡೆದು, ಪುನೀತರಾಗಬೇಕಾಗಿ ಕೋರಿಕೆ.

ಪವಿತ್ರ ಕ್ಷೇತ್ರ - ಸ್ವಚ್ಛತೆ ಕಾಪಾಡಿ - ಸ್ವಚ್ಛತೆಯೇ ಆರೋಗ್ಯ, ಆರೋಗ್ಯವೇ ಭಾಗ್ಯ

ಕಾರ್ಯಕ್ರಮಗಳು :

- ದಿನಾಂಕ : 28.02.2025ನೇ ಶುಕ್ರವಾರ ಬೆಳಿಗ್ಗೆ 9 ಗಂಟೆಗೆ ಶ್ರೀ ಕರಿಬಸವೇಶ್ವರ ಗದ್ದುಗೆಯ ಪೂಜೆ ಮತ್ತು ನಂದಿ ಧ್ವಜಾರೋಹಣ, ಅಂದೇ ರಾತ್ರಿ 8.30ಕ್ಕೆ ಜಾಗರಣೆ ಮತ್ತು ಭಜನೆ ಹಾಗೂ ಕೀರ್ತನೆ.
- ದಿನಾಂಕ : 01.03.2025ನೇ ಶನಿವಾರ ಬೆಳಿಗ್ಗೆ 8.00ಕ್ಕೆ ಶ್ರೀ ವೃಷಭಪುರಿ ಸಂಸ್ಥಾನ 1108 ಜಗದ್ಗುರು ಶ್ರೀ ಶ್ರೀ ಸಿದ್ಧರಾಮೇಶ್ವರ ದೇಶೀಕೇಂದ್ರ ಮಹಾಸ್ವಾಮಿಗಳು, ನಂದಿಗುಡಿ, ಇವರ ಅಮೃತ ಹಸ್ತದಿಂದ ರಥೋತ್ಸವದ ಮಹಾಪೂಜೆ ನಂತರ ಸಕಲ ವೈಭವಗಳೊಂದಿಗೆ ಮಹಾ ರಥೋತ್ಸವ ಪ್ರಾರಂಭ.
- ದಿನಾಂಕ : 02, ಭಾನುವಾರ, 03 ಸೋಮವಾರ, 04 ಮಂಗಳವಾರ : ಕಾಣಿಕೆ, ಜವಳ, ಕುಸ್ತಿಗಳು
- ದಿ.: 05.03.2025ರ ಬುಧವಾರ : ಪೂಜೆಯ ನಂತರ ಫಳಾರ ಹಾಕಿಸುವುದು, ಶ್ರೀ ಅಜ್ಜಯ್ಯನಿಗೆ ರಾಜೋಪಚಾರ ಪೂಜೆ
- ದಿನಾಂಕ : 06.03.2025ನೇ ಗುರುವಾರ ಬೆಳಿಗ್ಗೆ 10ಕ್ಕೆ ಶ್ರೀ ಕರಿಬಸವೇಶ್ವರ ಸ್ವಾಮಿಯ ಬೆಳ್ಳಿ ರಥೋತ್ಸವ ಮತ್ತು ರಾತ್ರಿ ಪಾಲಿಕೋತ್ಸವ
- ದಿನಾಂಕ : 07.03.2025ನೇ ಶುಕ್ರವಾರ ಶ್ರೀ ಅಜ್ಜಯ್ಯನ ಫಳ್ಹಾರ ಹಂಚುವುದು.

ಸಮಸ್ತ ಭಕ್ತಾದಿಗಳಿಗೆ ಭಕ್ತಿ ಪೂರ್ವಕ ಸುಸ್ವಾಗತ

ಶ್ರೀ ಕರಿಬಸವೇಶ್ವರ ಗದ್ದುಗೆ ಟ್ರಸ್ಟ್ ಕಮಿಟಿ (ರಿ.), ಊರ ಪ್ರಮುಖರು ಮತ್ತು ಊರ ನಾಗರಿಕರು
ಉಕ್ಕಡಗಾತ್ರಿ-581 119. ಹರಿಹರ ತಾ॥, ದಾವಣಗೆರೆ ಜಿಲ್ಲೆ, ಫೋ. : 08373-294157, 74834 15736







KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas